ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 11
Issue - 9
Pages - 20
₹ - 12
Septmeber - 2013

## ನಾಡಿನ ಜನತೆಗೆ ಗೌರಿ–ಗಣೇಶ ಹಬ್ಬದ ಶುಭಾಶಯಗಳು



ಗಜವದನ ಬೇಡುವೆ ಗೌರೀತನಯ; ತ್ರಿಜಗವಂದಿತನ ಸುಜನರ ಪೊರೆವನೆ
ಪಾಶಾಂಕುಶಧರ ಪರಮಪವಿತ್ರ; ಮೂಷಕವಾಹಕ ಮುನಿಜನ ಪ್ರೇಮ
ಮೋದದಿನಿನ್ನಯ ಪಾದವ ತೋರೋ; ಸಾಧುವಂದಿತನ ಆದರದಿಂದಲಿ
ಸರಸಿಜನಾಭ ಶ್ರೀ ಪುರಂದರ ವಿಠಲನನಿರುತ; ನೆನೆಯುವಂತೆ ದಯಮಾಡೋ... – ಪುರಂದರ ದಾಸರು



### 12ನೇ ಸಾಮಾನ್ಯ ಸಭೆ

20ನೇ ಸೆಪ್ಟೆಂಬರ್ 2013.
ಪುರಭವನ, ಬೆಂಗಳೂರು.

- ಸೌಹಾರ್ದ ಸಹಕಾರಿಗಳ ಸಂಖ್ಯೆ : 2535
- 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 514

ಅಧ್ಯಕ್ಷರ ನುಡಿ



"ರಾಜ್ಯದ ಸೌಹಾರ್ದ ಸಹಕಾರಿಗಳು ಈ ವಿಷಯಗಳಿಗೆ ಹೆಚ್ಚು ಮಹತ್ವವನ್ನು ನೀಡುವುದು ಅವಶ್ಯಕ. ಸೌಹಾರ್ದ ಸಹಕಾರಿಗಳ ಬೆಳವಣಿಗೆ ಸಂಖ್ಯಾತ್ಮಕವಾಗಿ ಗುಣಾತ್ಮಕವಾಗಿ ಬೆಳೆಯುವ ಕಾರ್ಯದಲ್ಲಿ ಸದಸ್ಯರ ಪಾಲುಗಾರಿಕೆಗೆ ಅಗತ್ಯ ಕ್ರಮವಿಡಬೇಕು. ಸಂಸ್ಥೆಯ ಆರ್ಥಿಕ ಸದೃಢತೆಯನ್ನು ಬೆಳೆಸಿಕೊಳ್ಳಬೇಕು."

# ಸಹಕಾರಿ ಅಸ್ತಿತ್ವ – ಸಹಕಾರಿಗಳ ಜವಾಬ್ದಾರಿ

## (COOPERATIVE IDENTITY - MEMBERS RESPONSIBILITY )

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಗೌರಿ–ಗಣೇಶ ಹಬ್ಬದ ಶುಭಾಶಯಗಳು. ಸಹಕಾರಿ ಕ್ಷೇತ್ರದ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಕಾಣುವ ಎಲ್ಲಾ ವಿಘ್ನಗಳನ್ನು ಶ್ರೀ ವಿಘ್ನವಿನಾಯಕ ಗಣೇಶನು ನಿವಾರಿಸಲಿ. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಲು ಶಕ್ತಿ ನೀಡಲಿ ಎಂದು ಶ್ರೀಗೌರಿ ದೇವಿಯಲ್ಲಿ ಪ್ರಾರ್ಥಿಸುತ್ತೇನೆ. ಈ ಹಬ್ಬವು ನಿಮ್ಮೆಲ್ಲರಿಗೂ ಮಂಗಳಕರವಾಗಲಿ ಎಂದು ಸಂಯುಕ್ತ ಸಹಕಾರಿಯು ಹಾರೈಸುತ್ತದೆ.

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು 2011 ರಿಂದ 2020 "10 ವರ್ಷಗಳ ಸಹಕಾರ ಕ್ಷೇತ್ರ" ನೀಲ ನಕ್ಷೆಯನ್ನು ಸಿದ್ಧಪಡಿಸಿದ್ದಾರೆ. 2020ರ ವೇಳೆಗೆ ಸಹಕಾರಿಗಳು ಉತ್ತಮ ವ್ಯವಹಾರಿಕ ಸಂಸ್ಥೆಗಳೆಂದು ಗುರುತಿಸಿಕೊಳ್ಳಬೇಕಿರುವ ಅವಶ್ಯಕತೆಗಳಿಗೆ ಒತ್ತುಕೊಟ್ಟಿರುತ್ತದೆ ಈ ಅವಧಿಯನ್ನು ಸಹಕಾರಿ ಕ್ಷೇತ್ರದಲ್ಲಿ ವಿಶ್ವಾಸಾರ್ಹ ಬೆಳವಣಿಗೆ ನೀರಿಕ್ಷಿಸಲಾಗಿದೆ.


ಈ ನಕ್ಷೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ವಿಶ್ವ ಸಂಸ್ಥೆಯವರು 2012ನೇ ಸಾಲಿನಲ್ಲಿ ಅಂತರ ರಾಷ್ಟ್ರೀಯ ಸಹಕಾರಿಗಳ ವರ್ಷವನ್ನು ಆಚರಿಸಲು ಕರೆ ನೀಡಿದ್ದರು. ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬಲ್ಲವು ಎಂದು ಘೋಷಣೆಯನ್ನು ಹೇಳಲಾಗಿತ್ತು. ಪರಿಣಾಮವಾಗಿ ವಿಶ್ವದಾದ್ಯಂತ ಸಹಕಾರಿ ವ್ಯವಸ್ಥೆಯ ಚಟುವಟಿಕೆಗಳು ಚುರುಕುಗೊಂಡಿರುವುದನ್ನು ಗಮನಿಸಿವೆ. ಈ ಹಿನ್ನೆಲೆಯಲ್ಲಿಯೆ ಜುಲೈ 6 ರಂದು ಅಂತರ ರಾಷ್ಟ್ರೀಯ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ "ಸಹಕಾರಿ ಸಂಸ್ಥೆಗಳು ವಿಪತ್ತಿನಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ" ಎಂಬುದಾಗಿ ಘೋಷಿಸಿದರು.

ಈ ನೀಲ ನಕ್ಷೆಯ ಸಾರಾಂಶ ಸಹಕಾರಿ ಕ್ಷೇತ್ರದ ಬೆಳವಣಿಗೆ ಸದಸ್ಯರ ಸಕ್ರೀಯ ಪಾಲುಗಾರಿಕೆಗೆ (PARTICIPATION) ಮಹತ್ವ ನೀಡುವುದು–ಸಹಕಾರಿ ಸಂಸ್ಥೆಗಳು ನಿರಂತರ ಉತ್ತಮ ಕಾರ್ಯನಿರ್ವಹಣೆಯ ಶಕ್ತಿಯನ್ನು (ಸದೃಢತೆಯನ್ನು) (SUSTAINABILITY) ಬೆಳೆಸಿಕೊಳ್ಳುವುದು–ಸಹಕಾರಿ ಸಂಸ್ಥೆಗಳ ಬಂಡವಾಳವನ್ನು (CAPITAL) ಬಲಪಡಿಸುವುದು – ಕಾಯ್ದೆ ಕಾನೂನು ನಿಯಮಗಳ ಪಾಲನೆಗೆ ಆದ್ಯತೆ (LEGAL FRAMEWORK) ನೀಡುವುದು ತನ್ಮೂಲಕ ಸಹಕಾರಿ ಸಂಸ್ಥೆಗಳ ವ್ಯಕ್ತಿತ್ವ ಅಸ್ತಿತ್ವವನ್ನು (IDENTITY) ಸ್ಥಾಪಿಸುವುದಾಗಿದೆ. ಈ ವಿಷಯಗಳಿಗೆ ಆದ್ಯತೆ ನೀಡಿ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಉತ್ತಮವಾಗುತ್ತದೆ ಹಾಗೂ ಬೆಳವಣಿಗೆ ನಿರಂತರವಾಗಿರುತ್ತದೆ ಎಂಬುದಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ವಿಷಯಗಳಿಗೆ ಹೆಚ್ಚು ಮಹತ್ವವನ್ನು ನೀಡುವುದು ಅವಶ್ಯಕ. ಸೌಹಾರ್ದ ಸಹಕಾರಿಗಳ ಬೆಳವಣಿಗೆ ಸಂಖ್ಯಾತ್ಮಕವಾಗಿ ಗುಣಾತ್ಮಕವಾಗಿ ಬೆಳೆಯುವ ಕಾರ್ಯದಲ್ಲಿ ಸದಸ್ಯರ ಪಾಲುಗಾರಿಕೆಗೆ ಅಗತ್ಯ ಕ್ರಮವಿಡಬೇಕು. ಸಂಸ್ಥೆಯ ಆರ್ಥಿಕ ಸದೃಢತೆಯನ್ನು ಬೆಳೆಸಿಕೊಳ್ಳಬೇಕು. ಕಾನೂನು ಹಾಗೂ ನಿಯಮಗಳ ಪಾಲನೆಗೆ ಆದ್ಯತೆಯನ್ನು ನೀಡಬೇಕು ಹೀಗಾದಾಗ ಮಾತ್ರ ಸಾರ್ವಜನಿಕ ಕ್ಷೇತ್ರದಲ್ಲಿ, ಸರಕಾರಗಳಲ್ಲಿ ಸಹಕಾರಿ ಸಂಸ್ಥೆಯನ್ನು ಗುರುತಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು

# ಸಂಪಾದಕೀಯ



## ಸಹಕಾರಿ ತತ್ವಗಳಲ್ಲಿ ಸಾಮಾಜಿಕ ಕಳಕಳಿ

ಸಹಕಾರಿಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಅವಕಾಶವನ್ನು ಸಹಕಾರಿ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯಲ್ಲಿ ಒದಗಿಸಲಾಗಿದೆ. ಸಾಮಾನ್ಯವಾಗಿ ಒಂದು ಸಹಕಾರ ಸಂಘವನ್ನು ಸಮಾನ ಮನಸ್ಕರು ಸಮಾನತೆಯ ತಳಹದಿಯ ಮೇಲೆ ಒಂದು ಸಾಮಾನ್ಯ ಉದ್ದೇಶದ ಸಫಲತೆಗಾಗಿ ಪ್ರಾರಂಭಿಸಿರುತ್ತಾರೆ. "ತಾನು ಎಲ್ಲರಿಗಾಗಿ ಹಾಗೂ ಎಲ್ಲರೂ ತನಗಾಗಿ" ಎಂಬ ಉದಾತ್ತ ತತ್ವದ ತಳಹದಿಯೆ ಈ ಸಹಕಾರ ಕ್ಷೇತ್ರದ ಮೂಲಮಂತ್ರವಾಗಿದೆ. ಇದು ವಾಸ್ತವ.

ಸಹಕಾರಿ ತತ್ವಗಳಲ್ಲಿ ಸಾಮಾಜಿಕ ಕಳಕಳಿ ಎಂಬ ಮಹತ್ವದ ವಿಷಯ ಅಗಡಿರುವುದು ಸಹಕಾರಿ ಸಿದ್ಧಾಂತಕ್ಕೆ ಕಳಸ ಪ್ರಾಯವಾಗಿದೆ. ಸಹಕಾರಿ ಸಂಸ್ಥೆಗಳನ್ನು ಸಾರ್ವಜನಿಕವಾಗಿ ಗುರುತಿಸುವಲ್ಲಿ ಪ್ರಧಾನಪಾತ್ರ ವಹಿಸುತ್ತದೆ.

ಶತಮಾನದ ಇತಿಹಾಸವಿರುವ ಈ ಸಹಕಾರಿ ಕ್ಷೇತ್ರ ಹಾಗು 12 ವಸಂತಗಳನ್ನು ಪೂರೈಸಿರುವ ಸೌಹಾರ್ದ ಸಹಕಾರಿ ಕ್ಷೇತ್ರಗಳ ಕಾರ್ಯನಿರ್ವಹಣೆಯಲ್ಲಿ ಅನೇಕ ಸಹಕಾರಿ ಸಂಸ್ಥೆಗಳ ಬೆಳವಣಿಗೆಯನ್ನು ಅಧ್ಯಯನ ಮಾಡಿದಾಗ ಕೆಲವು ಸಹಕಾರಿ ಸಂಸ್ಥೆಗಳು ಸಮಾಜಮುಖಿಯಾಗಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಸಾಂಪ್ರದಾಯಿಕ ವ್ಯವಹಾರಗಳಿಂದ ಹೊರಬಂದು ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳನ್ನು ಹಮ್ಮಿಕೊಂಡು ಸಮಾಜದ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುವ ಅನಿವಾರ್ಯತೆಯನ್ನು ಸಹಕಾರಿಗಳು ಗಮನಿಸಬೇಕಿದೆ.

ಸಾರ್ವಜನಿಕ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯಗಳ ವ್ಯವಸ್ಥೆ, ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೋತ್ಸಾಹ, ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು, ಗ್ರಾಮೀಣ ಕಲೆ ಹಾಗೂ ಕರಕುಶಲ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಹೀಗೆ ಒಟ್ಟಾರೆ ಸಮಾಜದ ಎಲ್ಲ ಅಭಿವೃದ್ಧಿ ಕಾರ್ಯಗಳಲ್ಲಿ ಸಹಕಾರಿ ಸಂಸ್ಥೆಗಳು ತೊಡಗಿಸಿಕೊಂಡಾಗ ಸಹಕಾರ ಕ್ಷೇತ್ರ ಸಾರ್ವಜನಿಕವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರಾಮುಖ್ಯತೆ ದೊರೆಯುತ್ತದೆ.

97 ಸಂವಿಧಾನ ತಿದ್ದುಪಡಿ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ನೀಡಿದೆ. ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಗೆ, ಪಾರದರ್ಶಕತೆಗೆ ಹಾಗೂ ವ್ಯವಹಾರಿಕ ಸ್ವಾತಂತ್ರ ನೀಡುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗಿದೆ. ಬಾಹ್ಯ ಹಸ್ತಕ್ಷೇಪಗಳಿಗೆ ಅವಕಾಶ ಕಡಿಮೆಗೊಳಿಸಿರುವುದು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಈ ವಿಷಯಗಳ ಜೊತೆಗೆ ಸಹಕಾರ ತತ್ವವಾಗಿರುವ ಸಾಮಾಜಿಕ ಕಳಕಳಿಯನ್ನು ರೂಢಿಸಿಕೊಂಡರೆ ಸಹಕಾರ ಸಂಘಟನೆಗಳು ಉತ್ತಮ ಆರ್ಥಿಕ ವ್ಯವಸ್ಥೆಯಾಗಿ ಬೆಳೆಯುವುದರ ಜೊತೆಗೆ ಜನರ ಜೀವನ ಪದ್ಧತಿಯಾಗುವುದರ ಜೊತೆಗೆ ದೇಶದ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿಸುವಲ್ಲಿ ಉತ್ತಮ ಸಾಧನವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

### ಒಳ ಪುಟಗಳಲ್ಲಿ...


ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ (ICA) .................. 4
ಸದಸ್ಯ ಸಹಕಾರಿಗಳಿಗೆ ಇ–ಮೇಲ್ ಐಡಿ ಸೌಲಭ್ಯ ............. 6
ಬದಲಾವಣೆಗೆ ಒಪ್ಪಿಕೊಳ್ಳುವ ಮಾನಸಿಕ ಸ್ಥಿತಿಯನ್ನು ರೂಢಿಸಿ ಕೊಂಡಿರುವುದು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ವಿಶೇಷ – ಮನೋಹರ ಮಸ್ಕಿ ...................................... 7
ಮಹಿಳಾ ದೌರ್ಜನ್ಯ ತಡೆ ಹಾಗೂ ಸಂರಕ್ಷಣೋಪಾಯಗಳ ಸಾಮಾಜಿಕ ಜಾಗೃತಿ ತರಬೇತಿ ಕಾರ್ಯಕ್ರಮ .................... 8
ಶಿವಮೊಗ್ಗದ ಶ್ರೀ ಶಾರದ ಸೌಹಾರ್ದ ಸಹಕಾರಿಯ ವಿಶೇಷತೆ ...... 9
67ನೇ ಸ್ವಾತಂತ್ರ್ಯೋತ್ಸವಾಚರಣೆ ..................................... 10
"ವ್ಯಕ್ತಿತ್ವ ವಿಕಸನ ತರಬೇತಿ" ಕಾರ್ಯಕ್ರಮ ........................ 11
ಶ್ರೀಗಂಧ ಸೌಹಾರ್ದ ಸಹಕಾರಿಗೆ ನೂತನ ಕಟ್ಟಡ ............. 12
ಆರ್ಥಿಕ ನಿರ್ವಹಣೆ : ಇಂದಿನ ತುರ್ತು ಅಗತ್ಯ ............... 13
ನೇರ ತೆರಿಗೆ ಸಂಹಿತೆ – ಮಹಿಳಾ ಸಬಲೀಕರಣ ............. 14
ವೆಬ್‌ಸೈಟ್ ಪರಿಚಯ ................................................ 16
ವ್ಯಕ್ತಿ ಪರಿಚಯ ....................................................... 17
ನಿಮ್ಮ ಪ್ರಶ್ನೆ ನಮ್ಮ ಉತ್ತರ ........................................ 18
ಜಾಹೀರಾತು ........................................................... 20

# ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ (ICA)

⏩ ಮೂಲ : (ICA) ನೀಲ ನಕ್ಷೆ

## ಸಹಕಾರ ದಶಕದ ನೀಲನಕ್ಷೆ

⏩ ಅನುವಾದ : ದಿವ್ಯ ಟಿ.

### ಪೀಠಿಕೆ – ಆಶಾದಾಯಕ ಬೆಳವಣಿಗೆ :

2009ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 2012ನ್ನು ಅಂತರ ರಾಷ್ಟ್ರೀಯ ಸಹಕಾರ ವರ್ಷವಾಗಿ ಆಚರಿಸಲು ಘೋಷಿಸಲಾಯಿತು.

ಆರ್ಥಿಕ ಪ್ರಕ್ಷುಬ್ಧತೆಯಿಂದಾಗಿ ಮುಂದಿನ ಐದು ವರ್ಷಗಳಲ್ಲಿ ವಿಶ್ವದ ಹೆಚ್ಚು ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು ಬಿಕ್ಕಟ್ಟಿನ ಸ್ಥಿತಿಯಿಂದ ಹೊರಬರಲಾಗುವುದಿಲ್ಲ ಮತ್ತು ಅಭಿವೃದ್ಧಿಶೀಲ ಆರ್ಥಿಕತೆಗಳು ತಮ್ಮ ಸಹಸ್ರಾರು ಅಭಿವೃದ್ಧಿ ಗುರಿಗಳ ಅನ್ವೇಷಣೆಯಲ್ಲಿ ತೊಂದರೆಗೆಳಿರುತ್ತವೆ. ಇದಕ್ಕಾಗಿ ಹಲವು ರಾಷ್ಟ್ರಗಳು, ಸರ್ಕಾರಗಳು ಸಾಮಾಜಿಕ ಮತ್ತು ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸಿ ಆರ್ಥಿಕ ಪ್ರಕ್ಷುಬ್ಧತೆಯನ್ನು ಕಡಿಮೆಗೊಳಿಸಲು, ಇನ್ನೂ ಹೆಚ್ಚಿನ ನಾಗರೀಕರು ತೊಂದರೆಗೊಳಗಾಗುವುದನ್ನು ತಪ್ಪಿಸುವ ಪ್ರಯತ್ನದಲ್ಲಿವೆ. ಹೆಚ್ಚುತ್ತಿರುವ ಸಾಮಾಜಿಕ ಅಶಾಂತಿ, ಆರ್ಥಿಕ ನಿಶ್ಚಲತೆ ಮತ್ತು ಭವಿಷ್ಯದ ಅಭದ್ರತೆಯನ್ನು ನಿಭಾಯಿಸುವ, ಸುಧಾರಣೆ ಮಾಡುವ ಬಗ್ಗೆ ಸ್ವಲ್ಪ ಮಟ್ಟಿನ ಪ್ರಜ್ಞೆ ಈಗ ಬಂದಿದೆ. ಇದು ಆಶಾದಾಯಕ ಬೆಳವಣಿಗೆ.

ಈ ಅನಿಶ್ಚಿತತೆಗಳ ನಡುವೆಯೂ ಸಹಕಾರ ವಿಶ್ವದಾದ್ಯಂತ ನಾಗರೀಕರಿಗೆ ಕೆಲವು ನಿರ್ದೇಶನಗಳು, ಭರವಸೆಗಳು ಮತ್ತು ಸ್ಪಷ್ಟತೆಯನ್ನು ಒದಗಿಸುತ್ತದೆ. ವಿಶಿಷ್ಟವಾದ ಉದ್ಯಮಗಳ ನಡುವೆ ಸಹಕಾರವು ಪ್ರಜಾಪ್ರಭುತ್ವ ನಿಯಂತ್ರಣದ ಅಡಿಯಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಒದಗಿಸುತ್ತವೆ. ಸಹಕಾರಿ ಮಾದರಿಯು ವ್ಯಾವಹಾರಿಕ ದಕ್ಷತೆ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ವ್ಯವಹಾರವನ್ನು ನಡೆಸುವುದರ ಮೂಲಕ ವಿಸ್ತಾರ ವ್ಯಾಪ್ತಿಯ ಮಾನವನ ಅಗತ್ಯಗಳನ್ನು ತನ್ನ ವ್ಯಾಪ್ತಿಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಈ ವಿಧಾನವು ಅತ್ಯಂತ ಸಣ್ಣ ಆಧಾರದ ಮೇಲೆ ಮತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವುದಾಗಿದೆ. ಸಹಕಾರಿ ಕ್ಷೇತ್ರವು ಜಗತ್ತಿನಾದ್ಯಂತ ಲಕ್ಷಾಂತರ ಉದ್ಯೋಗವನ್ನು ಒದಗಿಸುತ್ತದೆ. ಸಹಕಾರವು ವೈಯಕ್ತಿಕ ಭಾಗವಹಿಸುವಿಕೆಯ ಅಭಿವೃದ್ಧಿ, ವೈಯಕ್ತಿಕ ಆತ್ಮವಿಶ್ವಾಸ ಮತ್ತು ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಲು ಮತ್ತು ಸಾಮಾಜಿಕ ಬಂಡವಾಳವನ್ನು ರಚಿಸಲು ಸಹಕಾರಿಯಾಗುತ್ತದೆ. ಸಹಕಾರಿ ಸಂಸ್ಥೆಗಳು ದೀರ್ಘಾವಧಿಯ ಭದ್ರತೆಯನ್ನು ರಚಿಸಲು, ಅವುಗಳನ್ನು ದೀರ್ಘಕಾಲದವರೆಗೂ ಉಳಿಯುವಂತೆ, ಸುಸ್ಥಿರವಾಗುವಂತೆ ಮತ್ತು ಯಶಸ್ವಿಯಾಗುವಂತೆ ಮಾಡುತ್ತದೆ.

### ಐತಿಹಾಸಿಕ ನಿರ್ಧಾರ :

ಇದು ಸಹಕಾರಿ ಕ್ಷೇತ್ರಕ್ಕೆ ದೊರೆತ ಅವಕಾಶಗಳಲ್ಲಿ ಐತಿಹಾಸಿಕ ಕ್ಷಣವಾಗಿದೆ. ವೇಗವಾಗಿ ಬದಲಾಗುತ್ತಿರುವ ವಿಶ್ವದಲ್ಲಿನ ಅನೇಕ ರಾಷ್ಟ್ರಗಳು ರಾಜಕೀಯ ಸಂಸ್ಥೆಗಳೊಂದಿಗೆ ಮುಂದುವರಿಸಿಕೊಂಡು ಹೋಗಲು ಹೆಣಗಾಡುತ್ತಿವೆ. ನಾಗರೀಕರ ಉದ್ಯಮಶೀಲತೆ, ಕುಶಲತೆಯನ್ನು ಹೆಚ್ಚಿಸುವುದು ಅವಶ್ಯಕವಾಗಿದೆ. ಸಹಕಾರವು ವಿಶ್ವ ಸಮುದಾಯದ ಅನಿವಾರ್ಯತೆಯನ್ನು ಎದುರಿಸಲು, ಸಾಮಾಜಿಕ ಮತ್ತು ಪರಿಸರೀಯ ಸವಾಲುಗಳನ್ನು ಎದುರಿಸಲು ಸಹಾಯಕವಾಗುತ್ತದೆ. 2012ರಲ್ಲಿ ಸಹಕಾರಿಯು ಬಲವಾಗಿದೆ ಎಂದು ಪರವಾಗಿ ವಾದ ಹೊಂದಿದವರು ವಿರಳವಾಗಿದ್ದರು. ಆದರೆ ಮುಂದಿನ ಕೆಲವು ವರ್ಷಗಳಲ್ಲಿ ಸಂಘಟಿತ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ ಚಳುವಳಿಯು ಸೋಲಬಹುದು.

2020ರ ಹೊತ್ತಿಗೆ ಬಡತನ ಹೆಚ್ಚುತ್ತದೆ, ಯುವ ಜನರ ಅವಸ್ಥೆ ಹದಗೆಡುತ್ತದೆ ಮತ್ತು ಜಾಗತಿಕ ತಾಪಮಾನ ದೈನಂದಿನ ಜೀವನದ ಮೇಲೆ ಹೆಚ್ಚಾಗಿ ಪರಿಣಾಮಗಳನ್ನು ಬೀರುತ್ತದೆ. 2020ರಲ್ಲಿ ಸಹಕಾರ ಕಲ್ಪನೆಗೆ ತಿರುವು ಪ್ರತಿನಿಧಿಸುವಾಗ 2012ನ್ನು ಹಿಂತಿರುಗಿ ನೋಡಲು ಸಮರ್ಥರಾಗಿರಬೇಕು ಮತ್ತು ಇದು ಜನರ ಭದ್ರತೆಗೆ, ಯೋಗಕ್ಷೇಮ ಮತ್ತು ಸಂತೋಷಗಳಿಗೆ ಕೊಡುಗೆ ನೀಡುವಂತಿರಬೇಕು.

### ಉದ್ದೇಶ – ವಿಶ್ವವ್ಯಾಪಿ ಅಭಿಯಾನ ಹೊಂದುವ ಮಹತ್ವಾಕಾಂಕ್ಷೆ :

ಈ ದಾಖಲೆಯನ್ನು ಅಕ್ಟೋಬರ್ 2012ರಂದು ಮ್ಯಾಂಚೆಸ್ಟರ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ (ICA)ದ ಸಾಮಾನ್ಯ ಸಭೆಯಲ್ಲಿ ಕರಡು ಎಂದು ಪರಿಗಣಿಸಲಾಗಿತ್ತು. ಅಭಿಪ್ರಾಯ ಮತ್ತು ಚರ್ಚೆಯ ನಂತರ (ಈಗ ಇದು ಪರಿಷ್ಕೃತ ಆವೃತ್ತಿಯಾಗಿದೆ) ನೀಲಿನಕ್ಷೆಯನ್ನು ಮಹಾಸಭೆಯು ಅಂಗೀಕರಿಸಿತು. ಈಗ ಇದನ್ನು ಅಂತಿಮ ರೂಪದಲ್ಲಿ ನೀಡಲಾಗಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಂತರರಾಷ್ಟ್ರೀಯ ಸಹಕಾರ ವರ್ಷದ ಉದ್ದೇಶವೇನೆಂದರೆ ವಿಶ್ವವ್ಯಾಪಿಯಾದ ಅಭಿಯಾನವನ್ನು ಆರಂಭಿಸುವುದು, ಸಹಕಾರಿ ಉದ್ಯಮವನ್ನು ಹೊಸ ಮಟ್ಟಕ್ಕೆ ತೆಗೆದುಕೊಂಡು ಹೋಗುವುದು. ಈ ನೀಲಿನಕ್ಷೆಯ ಮಹತ್ವಾಕಾಂಕ್ಷೆ ಯೋಜನೆಯು – "2020ರ ದೃಷ್ಟಿ" – 2020ರಲ್ಲಿ ಸಹಕಾರಿ ಉದ್ಯಮದ ರೂಪವು : * ಆರ್ಥಿಕ, ಸಾಮಾಜಿಕ ಮತ್ತು ಪರಿಸರೀಯ ಸುಸ್ಥಿರತೆಯನ್ನು ಮುಖಂಡರು ಒಪ್ಪಿಕೊಳ್ಳುವುದು. * ಜನರಿಂದ ಆದ್ಯತೆ ಪಡೆದ ಮಾದರಿ. * ವೇಗವಾಗಿ ಬೆಳೆಯುತ್ತಿರುವ ಉದ್ಯಮದ ರೂಪ.

2020ರ ದೃಷ್ಟಿಯು ಅಂತರರಾಷ್ಟ್ರೀಯ ಸಹಕಾರ ವರ್ಷದ ಸಾಧನೆಗಳು ಮತ್ತು ಮಹಾನ್ ಆರ್ಥಿಕ ಕುಸಿತದಲ್ಲಿಯೂ ಸಹಕಾರಿ ಚಳುವಳಿಯ ಮೂಲಕ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಲು ಯತ್ನಿಸುವುದಾಗಿದೆ. ನೀಲಿನಕ್ಷೆಯಲ್ಲಿ ರೂಪಿಸಲಾದ ಕಾರ್ಯತಂತ್ರವನ್ನು ಮುಂದುವರಿಸುವುದರ ಮೂಲಕ ನಾವು 2011–2020ನ್ನು ಸಹಕಾರಿ ದಶಕವನ್ನಾಗಿಸುವ ಗುರಿಯನ್ನು ವಿಶ್ವಾಸದಿಂದ ಸಾಧಿಸಬಹುದಾಗಿದೆ.

# ಸಹಕಾರಿ ಕ್ಷೇತ್ರವನ್ನು ಬಲಪಡಿಸಿ

## ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬ್ಯಾನ್ ಕಿ ಮೂನ್ ಕರೆ



ಸಹಕಾರಿ ಸಂಸ್ಥೆಗಳು ದೇಶಗಳ ಆರ್ಥಿಕ ಬಿಕ್ಕಟ್ಟಿನಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ರಾಷ್ಟ್ರೀಯ ವಿಪತ್ತುಗಳನ್ನು ಕೂಡ ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸಿದ ದೃಷ್ಟಾಂತಗಳಿವೆ. ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧತೆಯನ್ನು ಮೆರೆದಿರುವ ಈ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ,ಸರಕಾರದ ನೀತಿ ನಿಯಮಗಳ ಘೋಷಣೆ ಮಾಡುವಾಗ ಕಾರ್ಯಕ್ರಮಗಳ ಅನುಷ್ಠಾನ ಮಾಡುವಾಗ ಸಹಕಾರಿ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡುವುದ ಜೊತೆಗೆ ಈ ಕ್ಷೇತ್ರವನ್ನು ಬಲಪಡಿಸುವ ಕ್ರಮಗಳನ್ನು ಜಾರಿಮಾಡುವಂತೆ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮನವಿ ಮಾಡಿದ್ದಾರೆ.

"ಅಂತರರಾಷ್ಟ್ರೀಯ ಸಹಕಾರ ವರ್ಷವು ಸಹಕಾರಿ ವಲಯಕ್ಕೆ ಪ್ರಬಲ ಕೇಂದ್ರಬಿಂದುವನ್ನು ಒದಗಿಸಿದೆ". ಅಂತರರಾಷ್ಟೀಯ ಸಹಕಾರ ವರ್ಷದ ಆಚರಣೆಗಳು, ವಿಶ್ವದೆಲ್ಲೆಡೆ ಅಂತರರಾಷ್ಟ್ರೀಯ ಸಮಾವೇಶಗಳು ಮತ್ತು ಶೃಂಗಗಳ ಮೂಲಕ ಒಪ್ಪಿಕೊಂಡ ಫಲಿತಾಂಶಗಳ ಘೋಷಣೆ ಮಾಡುವುದು, ಹಾಗೆಯೇ ವಿಶ್ವದ ಎಲ್ಲೆಡೆಗೂ 2012ರ ಅಂತರರಾಷ್ಟ್ರೀಯ ಸಹಕಾರಿ ವರ್ಷದ ಲಾಂಛನವನ್ನು ತೆಗೆದುಕೊಂಡು ಹೋಗುವುದಾಗಿದೆ. ಇದು ನಾಗರೀಕ ಸಮಾಜದ ಮತ್ತು ಸರ್ಕಾರದ ಮತ್ತು ಅಂತರ–ಸರ್ಕಾರ ಸಂಸ್ಥೆಗಳ ನಡುವೆ, ಸ್ವತಃ ಕ್ಷೇತ್ರದ ಮಿತಿಗಳನ್ನು ಮೀರಿ ಸಹಕಾರವು ಬೆಳೆಯುವಂತೆ ಮಾಡಿದೆ.

ಇವುಗಳು ಗಮನಾರ್ಹ ಸಾಧನೆಗಳು, ಆದರೆ ನಿರೀಕ್ಷಿತ ಭವಿಷ್ಯಕ್ಕಾಗಿ ನಮ್ಮ ರಾಜಕೀಯಗಳನ್ನು, ಸಮಾಜಗಳನ್ನು ಮತ್ತು ಆರ್ಥಿಕತೆಗಳನ್ನು ಪ್ರಾಬಲ್ಯವಾಗಿ ಅಸ್ತಿತ್ವಕ್ಕೆ ಬರುತ್ತಿರುವ ಪ್ರವೃತ್ತಿಗಳಿಗೆ ತಕ್ಕಂತೆ ಕಾಣುವ ಅಗತ್ಯವಿದೆ. ಕೆಲವು ಅತ್ಯಂತ ನಿರ್ಣಾಯಕ ಜಾಗತಿಕ ಪ್ರವೃತಿಗಳೆಂದರೆ : * ಪರಿಸರ ಸವಕಳಿ ಮತ್ತು ಸಂಪನ್ಮೂಲಗಳ ಬರಿದಾಗುವಿಕೆ. * ಅಸ್ಥಿರವಾದ ಆರ್ಥಿಕ ಕ್ಷೇತ್ರ. * ಹೆಚ್ಚುತ್ತಿರುವ ಅಸಮಾನತೆ. * ಬೆಳೆಯುತ್ತಿರುವ ಜಾಗತಿಕ ಆಡಳಿತದ ಅಂತರ. * ರಾಜಕೀಯ ಮತ್ತು ಆರ್ಥಿಕ ಸಂಘಟನೆಗಳಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವುದು.

ಸಹಕಾರಿ ಉದ್ಯಮದ ರೂಪವನ್ನು ದೂರದ ಹೆಚ್ಚು ಜನರಿಗೆ ಅರಿವುಂಟು ಮಾಡುವುದು, ಜನರಿಗೆ ಸಾಧನಗಳನ್ನು ಒದಗಿಸುವುದು ಮತ್ತು ಪುನರ್ ಸ್ಥಾಪಿಸುವುದು, ನಿಧಿಗಳು ಮತ್ತು ಸಹಕಾರದ ಸುಸ್ಥಿರ ಅಭಿವೃದ್ಧಿ ಮತ್ತು ಅವುಗಳಲ್ಲಿನ ಅಡೆತಡೆಗಳನ್ನು ತೆಗೆದುಹಾಕುವುದು ಇವುಗಳಿಗೆ ಪ್ರಮುಖ ಆದ್ಯತೆಯನ್ನು ನೀಡುವುದು. ಈಗ ಈ ನೀಲಿನಕ್ಷೆಯನ್ನು ರಾಷ್ಟ್ರೀಯ ಕಾಯಗಳು, ಕ್ಷೇತ್ರದ ಗುಂಪುಗಳು, ಸಹಕಾರ ಸಂಘಗಳು ಮತ್ತು ವೈಯಕ್ತಿಕ ಸದಸ್ಯರುಗಳಿಗೆ ಅಳವಡಿಸುವುದು ICAಗೆ ಸವಾಲಾಗಿದೆ.

### ನೀಲನಕ್ಷೆಯ ಕಾರ್ಯತಂತ್ರದ ಸಾರಾಂಶ :

ಕಾರ್ಯತಂತ್ರದ ಆರಂಭಿಕ ಅಂಶವಾಗಿ ಸಹಕಾರದ ಹೊರಗಿನ ಪ್ರಪಂಚಕ್ಕೆ ಜಾಗತಿಕ ಸಹಕಾರ ಭವಿಷ್ಯವನ್ನು ಶಕ್ತಿಶಾಲಿಯಾಗಿ ಮಾಡುವುದಾಗಿದೆ. ಒಂದೇ ಮಾದರಿಯ ಪ್ರಾಬಲ್ಯಕ್ಕಿಂತ ಹೆಚ್ಚಾಗಿ ಜಾಗತಿಕ ಆರ್ಥಿಕತೆಗೆ ಹೆಚ್ಚು ಪರಿಣಾಮಕಾರಿಯಾದ ಸಮತೋಲನವನ್ನು ತರುತ್ತದೆ.

* ಸದಸ್ಯತ್ವ ಮತ್ತು ಆಡಳಿತವನ್ನು ಹೊಸ ಮಟ್ಟಕ್ಕೇರಿಸುವ ಗುರಿ : ಸಹಕಾರವು ಉತ್ತಮವಾಗಿದೆ ಏಕೆಂದರೆ ಒಡೆತನದ ಮೂಲಕ ವೈಯಕ್ತಿಕವಾಗಿ ಭಾಗವಹಿಸಲು, ಅಂತರ್ಗತವಾಗಿ ಹೆಚ್ಚು ತೊಡಗಿಸಿಕೊಳ್ಳಲು, ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಸಮಕಾಲೀನ ಜಗತ್ತಿಗೆ ಹೆಚ್ಚು ಸೂಕ್ತವಾಗಿದೆ. ಭಾಗವಹಿಸುವಿಕೆ (Participation) ಯ ಮೂಲಕ ಸದಸ್ಯತ್ವ ಮತ್ತು ಆಡಳಿತವನ್ನು ಹೊಸ ಮಟ್ಟಕ್ಕೇರಿಸುವ ಗುರಿಯಾಗಿದೆ.

* ಆರ್ಥಿಕ, ಸಾಮಾಜಿಕ ಮತ್ತು ಪರಿಸರೀಯ ಸುಸ್ಥಿರತೆ : ಸಹಕಾರವು ಉತ್ತಮವಾಗಿದೆ ಏಕೆಂದರೆ ತನ್ನ ವ್ಯವಹಾರ ಮಾದರಿಯ ಮೂಲಕ ಮಹತ್ತರವಾದ ಆರ್ಥಿಕ, ಸಾಮಾಜಿಕ ಮತ್ತು ಪರಿಸರೀಯ ಸುಸ್ಥಿರತೆ (Sustainability) ಯನ್ನು ಸೃಷ್ಟಿಸುತ್ತದೆ.

* ತನ್ನ ಬಾಹ್ಯ ಗುರುತನ್ನು (Identity) ಬೆಳೆಸುವ ಹಾಗೂ ಸಹಕಾರಿ ಸಂದೇಶವನ್ನು ನಿರ್ಮಿಸುವ ಮತ್ತು ಸಹಕಾರಿ ಗುರುತನ್ನು ರಕ್ಷಿಸುವ ಗುರಿ : ಸಹಕಾರವು ಉತ್ತಮವಾಗಿದೆ ಏಕೆಂದರೆ ಇವುಗಳ ಜನರು ವ್ಯವಹಾರದ ಮಾದರಿಯನ್ನು ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳಲು ಮತ್ತು ಜಾಗತಿಕ ಆರ್ಥಿಕ ವ್ಯವಹಾರದಲ್ಲಿ ನ್ಯಾಯಯುತ ಭಾಗವಹಿಸುವ ಮಹತ್ತರವಾದ ಪ್ರಜ್ಞೆಯನ್ನು ತರುತ್ತದೆ. ತನ್ನ ಬಾಹ್ಯ ಗುರುತನ್ನು (Identity) ಬೆಳೆಸುವುದೇ ಉದ್ದೇಶವಾಗಿದೆ. ಸಹಕಾರಿ ಸಂದೇಶವನ್ನು ನಿರ್ಮಿಸುವ ಮತ್ತು ಸಹಕಾರಿ ಗುರುತನ್ನು ರಕ್ಷಿಸುವ ಗುರಿಯನ್ನು ಹೊಂದಿದೆ.

* ಸಹಕಾರವು ಕಾನೂನಿನ ಚೌಕಟ್ಟಿ (Legal Framework) ನೊಳಗಿರುತ್ತದೆ. ಈ ಚೌಕಟ್ಟು ಸಹಕಾರದ ಕಾರ್ಯಸಾಧ್ಯತೆಯನ್ನು ಮತ್ತು ಅಸ್ತಿತ್ವವನ್ನು ಕುರಿತು ವಿಮರ್ಶಾತ್ಮಕ ಪಾತ್ರ ನಿರ್ವಹಿಸುತ್ತದೆ. ನೀಲಿನಕ್ಷೆಯು ಸಹಕಾರಿ ಬೆಳವಣಿಗೆಗೆ ಬೆಂಬಲವಾದ ಕಾನೂನು ಚೌಕಟ್ಟುಗಳು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ.

* ಬಂಡವಾಳಗಳು ಸುರಕ್ಷತೆಯ ಬಗ್ಗೆ ವಿಶ್ವಾಸವನ್ನು ಮೂಡಿಸುವುದು : ಸಹಕಾರಿಗಳನ್ನು ಸ್ಥಾಪಿಸುವುದಕ್ಕೆ, ಬೆಳವಣಿಗೆಗೆ ಮತ್ತು ಏಳಿಗೆಗೆ ಬಂಡವಾಳದ (Capital) ಅಗತ್ಯವಿದೆ. ಸಹಕಾರಿಯ ಸದಸ್ಯರ ನಿಯಂತ್ರಣವನ್ನು ಖಾತರಿ ಮಾಡುವಾಗ ಬಂಡವಾಳಗಳು ಸುರಕ್ಷತೆಯ ಬಗ್ಗೆ ವಿಶ್ವಾಸವನ್ನು ಮೂಡಿಸುವುದು ಗುರಿಯಾಗಿದೆ.

ಭಾಗವಹಿಸುವಿಕೆ, ಸುಸ್ಥಿರತೆ, ಗುರುತಿಸುವಿಕೆ, ಕಾನೂನು ಚೌಕಟ್ಟು, ಬಂಡವಾಳ ಇವುಗಳು ನೀಲಿನಕ್ಷೆ ಕಾರ್ಯತಂತ್ರದ ಐದು ಪರಸ್ಪರ ಮತ್ತು ಅತಿಕ್ರಮಿಸುವ ವಿಷಯಗಳಾಗಿವೆ.

**ಉಪಸಂಹಾರ :**

**2020ರ ದೃಷ್ಟಿಕೋನ :** ಸಹಕಾರ ದಶಕದ ನೀಲನಕ್ಷೆಯು ಮಹತ್ವಾಕಾಂಕ್ಷೆಯಾಗಿದೆ. (2020 Vision : Blueprint for a Co-operative Decade is unashamedly ambitious)

ಹೂಡಿಕೆದಾರ ಸ್ವಾಮ್ಯದ ವ್ಯವಹಾರಗಳು ವಿಫಲವಾಗಿದ್ದಾಗ ಸಹಕಾರಿ ಹರಿಕಾರರು ತಮ್ಮ ಹೊಸ ಕಲ್ಪನೆಗಳನ್ನು ಮೊದಲು ಕಾರ್ಯರೂಪಕ್ಕೆ ತಂದಾಗ, ಆ ಕಲ್ಪನೆಗಳು ಜನರಿಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಾರ್ಗವನ್ನು ಒದಗಿಸಿತು.

ಇಂದು ಆ ಕಲ್ಪನೆಗಳು ಎಲ್ಲಾ ಜನರಿಗೂ ಅಗತ್ಯವಿದೆ. ಜಾಗತಿಕ ಸಮುದಾಯವು ಸಾಂಪ್ರದಾಯಿಕ ವ್ಯವಹಾರ ಮಾಡುವುದರ ಮೂಲಕ ವಿಫಲವಾಗಿದೆ. ಅಲ್ಲಿ ಸುಸ್ಥಿರತೆಗಿಂತ ಲಾಭ ಮತ್ತು ಬೆಳವಣಿಗೆಯೇ ಹೆಚ್ಚು ಮುಖ್ಯ ಮತ್ತು ಪ್ರತಿಯೊಬ್ಬರಿಗೂ ಸಾರ್ವಜನಿಕ ಆಸಕ್ತಿಗಳಿಗಿಂತ ಕೆಲವು ಖಾಸಗಿ ಆಸಕ್ತಿಗಳೇ ಹೆಚ್ಚು ಮುಖ್ಯವಾಗಿದೆ.

ಆದರೆ ಇಂದು ಸಹಕಾರ ಕಲ್ಪನೆಗಳ ಕೆಲಸದ ಬಗ್ಗೆ ಹೆಚ್ಚಿನ ಜನರಿಗೆ ಅರಿವಿಲ್ಲ. ಅದಕ್ಕಾಗಿಯೇ ಪ್ರಸ್ತುತ ಈ ನೀಲಿನಕ್ಷೆಯು ಸಹಕಾರಿ ಸಂದೇಶವನ್ನು ಸ್ಪಷ್ಟೀಕರಿಸುವಲ್ಲಿ ಮತ್ತು ವಿಶ್ವ ಸಮುದಾಯಕ್ಕೆ ಪ್ರಸಾರ ಮಾಡುವಲ್ಲಿ ಎಷ್ಟರಮಟ್ಟಿಗೆ ಸಾಧಿಸುತ್ತದೆ ಎಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಂತರರಾಷ್ಟ್ರೀಯ ಸಹಕಾರ ವರ್ಷವು ಸಹಕಾರ ಕ್ಷೇತ್ರಕ್ಕೆ ವೇಗವರ್ಧಕವನ್ನು ಮತ್ತು ಸಹಕಾರ ಕಲ್ಪನೆಯ ಬಗ್ಗೆ ಜನರಿಗೆ ನಂಬಿಕೆಯನ್ನು ತಂದಿದೆ. ಇದು ಸಹಕಾರಿ ದಶಕದ ಆರಂಭಕ್ಕೆ ವೇದಿಕೆಯಾಗಿದೆ. ■

# ಸದಸ್ಯ ಸಹಕಾರಿಗಳಗೆ ಇ-ಮೇಲ್ ಸೌಲಭ್ಯ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇದು ಎಲ್ಲ ಸೌಹಾರ್ದ ಸಹಕಾರಿಗಳನ್ನು ಸುಲಭವಾಗಿ ಹಾಗೂ ಕ್ಷಿಪ್ರವಾಗಿ ತಲುಪುವ ಹಾಗೂ ಮಾಹಿತಿಗಳನ್ನು ತಲುಪಿಸುವ ಉದ್ದೇಶದಿಂದ ಅಂತರ್ಜಾಲ ಮಾಧ್ಯಮವನ್ನು ಬಳಸಿಕೊಳ್ಳುವ ಬಗ್ಗೆ ಚಿಂತನೆಯನ್ನು ಮಾಡಿದೆ. ಅಲ್ಲದೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು (ತಿದ್ದುಪಡಿ) 2013ರ ಕರಡು ಪ್ರತಿಯಲ್ಲಿ ಪ್ರಸ್ತಾಪಿಸಿದಂತೆ ನಿಯಮ 6ಸಿ(2)(ಬಿ) ಪ್ರಕಾರ ಸಾಮಾನ್ಯ ಸಭೆಯ ನೋಟೀಸನ್ನು ಇ ಮೇಲ್ ಮೂಲಕವೂ ಕಳುಹಿಸುವ ಅವಕಾಶ ಒದಗಿಸಲಾಗಿದೆ.



ದಿನಾಂಕ 08 ಆಗಸ್ಟ್ 2013ರಂದು ಬೆಂಗಳೂರಿನಲ್ಲಿ ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಎಲ್ಲ ಸೌಹಾರ್ದ ಸಹಕಾರಿಗಳಿಗೂ ಆಯಾ ಸೌಹಾರ್ದ ಸಹಕಾರಿಗಳ ಹೆಸರಿನಲ್ಲಿಯೇ ಇ ಮೇಲ್ ಐಡಿಯನ್ನು ರಚಿಸಿ ಒದಗಿಸಲು ತೀರ್ಮಾನಿಸಲಾಗಿರುತ್ತದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳೂ ಸೌಹಾರ್ದ ಹೆಸರಿನಿಂದ ರಚಿಸಲ್ಪಟ್ಟ ವಿಶೇಷವಾದ ಇ ಮೇಲ್ ಐಡಿಯನ್ನು ಹೊಂದುವುದು ಸೂಕ್ತವೆಂದು ಭಾವಿಸಿ, ಪ್ರತಿಯೊಂದು ಸಹಕಾರಿಗೂ ಇ ಮೇಲ್ ಸೌಲಭ್ಯವನ್ನು ರಚಿಸಿ ಒದಗಿಸುವ ಪ್ರಯತ್ನವನ್ನು ಸಂಯುಕ್ತ ಸಹಕಾರಿಯು ಮಾಡಿರುತ್ತದೆ.

ಸುಲಭವಾಗಿ ತಲುಪುವ ದೃಷ್ಟಿಯಿಂದ ಸಂಯುಕ್ತ ಸಹಕಾರಿಯ ಎಲ್ಲ ಸುತ್ತೋಲೆಗಳನ್ನು, ಮಾಹಿತಿಗಳನ್ನು ಹಾಗೂ ಪತ್ರ ವ್ಯವಹಾರಗಳನ್ನು ಸದರಿ ಇ ಮೇಲ್ ಐಡಿಗೆ ಮೇಲ್ ಮಾಡುವ ಮೂಲಕ ಕಳುಹಿಸಲಾಗುವುದು. ಈ ಇ –ಮೇಲ್ ಬಳಕೆಗೆ / ಮಾಹಿತಿಗೆ ಸಂಬಂಧಿಸಿದಂತೆ ದಿನಾಂಕ 02.09.2013ರಂದು ಸಂಯುಕ್ತ ಸಹಕಾರಿಯು ಬರೆದ ಪತ್ರವನ್ನು ಗಮನಿನಿಸಲು ಕೋರಿದೆ.

**ಬಳಕೆಯ ವಿಧಾನ :** ಅಂತರ್ಜಾಲದಲ್ಲಿ (ಯುಆರ್‌ಎಲ್ ವಿಭಾಗ/URL Address Bar)ನಲ್ಲಿ Webmail.souharda.coop ಬಳಸುವುದರ ಮೂಲಕ ಸದರಿ ಇ–ಮೇಲ್ ಐಡಿಯನ್ನು ತೆರೆಯಬಹುದು. ಸಂಯುಕ್ತ ಸಹಕಾರಿಯು ನೀಡಿದ ಪಾಸವರ್ಡ್‌ನ್ನು Options-login ವಿಭಾಗದಲ್ಲಿ ಬದಲಾಯಿಸಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ. ■

# ಬದಲಾವಣೆಗೆ ಒಪ್ಪಿಕೊಳ್ಳುವ ಮಾನಸಿಕ ಸ್ಥಿತಿಯನ್ನು ರೂಢಿಸಿಕೊಂಡಿರುವುದು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ವಿಶೇಷ – ಮನೋಹರ ಮಸ್ಕಿ




97ನೇ ಸಂವಿಧಾನ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯಾಗಿದೆ. ಸೌಹಾರ್ದ ಸಹಕಾರಿ ನಿಯಮಗಳನ್ನು ಸರಕಾರ ರಚಿಸುತ್ತಿದೆ. ಇವುಗಳಿಗೆ ಅನುಗುಣವಾಗಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಉಪವಿಧಿಗಳಿಗೆ ತಿದ್ದುಪಡಿ ಮಾಡಿಕೊಳ್ಳುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ತಿಳಿಸಿದರು.

ಉದ್ಘಾಟನೆಯನ್ನು ನೆರವೇರಿಸಿದ ಮಾಜಿ ಶಾಸಕ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಹಕಾರಿ ಬ್ಯಾಂಕುಗಳು ಬದಲಾವಣೆ, ತಾಂತ್ರಿಕತೆ, ಆಧುನಿಕತೆಯನ್ನು ಒಪ್ಪಿಕೊಂಡು ಕಾರ್ಯನಿರ್ವಹಿಸುವ ಮನೋಭಾವ ಬೆಳೆಸಿ ಕೊಂಡಿದ್ದೇವೆ. ಆದರೆ ಹಳೆ ಸಹಕಾರಿ ಕಾಯ್ದೆ ಯಡಿಯಲ್ಲಿ ಕಾರ್ಯನಿರ್ವಹಿಸುವ ಸಹಕಾರಿ ಸಂಸ್ಥೆಗಳು ಇದುವರೆಗೆ ಪ್ರತಿಯೊಂದನ್ನು ಸಹಕಾರಿ ಇಲಾಖೆಯ ಅನುಮತಿಗಾಗಿ ಕಾಯಬೇಕಾಗುತ್ತಿತ್ತು. ಹೀಗಾಗಿ ಪ್ರಗತಿ ಕುಂಠಿತವಾಗುತ್ತಿತ್ತು. ಆದರೆ 97ನೇ ಸಂವಿಧಾನ ತಿದ್ದುಪಡಿಯಿಂದ ಹಳೆಯ ಕಾಯ್ದೆಯವರಿಗೂ ಸಹ ಸೌಹಾರ್ದ ಸಹಕಾರಿಯ ಸಿಂಚನವಾಗಿದೆ. ಅಲ್ಲಿಯೂ ಸಹ ಸಾಕಷ್ಟು ಸ್ವಾಯತ್ತತೆಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಉಪವಿಧಿಗಳ ತಿದ್ದುಪಡಿ ಬಗ್ಗೆ ಈಗಾಗಲೇ ಸಾಕಷ್ಟು ಹೋಂ ವರ್ಕ್ ಮಾಡಲಾಗಿದೆ. ಈ ಕಾರ್ಯಾಗಾರದಲ್ಲಿ ಅನೇಕ ತಿದ್ದುಪಡಿಗಳ ಬಗ್ಗೆ ವಿವರವಾಗಿ ಚರ್ಚಿಸಿ ಅಂತಿಮವಾಗಿ ಸೌಹಾರ್ದ ಸಹಕಾರಿ ನಿಯಮಗಳ ರಚನೆಯಾದ ನಂತರ ಸಂಯುಕ್ತ ಸಹಕಾರಿಯಿಂದ ಎಲ್ಲ ಬ್ಯಾಂಕು ಗಳಿಗೂ ಉಪವಿಧಿಯ ಪ್ರತಿಯನ್ನು ಮೇಲ್‌ಮಾಡುವ ಕ್ರಮವಿಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠರವರು 97ನೇ ಸಂವಿಧಾನ ತಿದ್ದುಪಡಿಗಳಿಂದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕೆಲವು ಗೊಂದಲಗಳು ಉದ್ಭವಾಗಿದೆ. ಇವುಗಳ ನಿವಾರಣೆಗೆ ಈಗಾಗಲೇ ಸಂಬಂಧಿಸಿದವರಲ್ಲಿ ಮನವಿ ಸಲ್ಲಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ವಹಿಸಿದ್ದರು. ಸಂಯುಕ್ತ ಸಹಕಾರಿಯವರು ಪಟ್ಟಣ ಸೌಹಾರ್ದ ಬ್ಯಾಂಕುಗಳ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲು ಸಲಹೆ ನೀಡಿದರು.

ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಕುಮಾರರವರು ವಂದನಾ ರ್ಪಣೆ ಸಲ್ಲಿಸಿದರು. ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಉಪವಿಧಿಗಳ ತಿದ್ದುಪಡಿ ವಿಷಯದ ಜೊತೆಗೆ ಆಸ್ತಿ ಜವಾಬ್ದಾರಿಗಳ ನಿರ್ವಹಣೆ ಆಗೂ ಸಿಆರ್‌ಎಆರ್ ವಿಷಯಗಳ ಬಗ್ಗೆ ಉಪನ್ಯಾಸ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಾಗಾರದಲ್ಲಿ 18 ಸೌಹಾರ್ದ ಸಹಕಾರಿ ಬ್ಯಾಂಕುಗಳಿಂದ 43 ಪ್ರತಿನಿಧಿಗಳು ಭಾಗವಹಿಸಿದ್ದರು. ■

## ಅವಿರೋಧ ಆಯ್ಕೆ



ಶ್ರೀ ಜಿ.ಆರ್.ಸುಧೀಂದ್ರ
ಅಧ್ಯಕ್ಷರು



ಶ್ರೀ ಜಿ.ಕೆ. ಶ್ರೀನಿವಾಸ್
ಉಪಾಧ್ಯಕ್ಷರು

ತುಮಕೂರಿನ ಮಯೂರಿ ಮಿತ್ರ ಸೌಹಾರ್ದ ಪತ್ತಿನ ಸಹಕಾರಿಗೆ ಅವಿರೋಧವಾಗಿ ಅಧ್ಯಕ್ಷ ಉಪಾಧ್ಯಕ್ಷರು ಆಯ್ಕೆಯಾಗಿರುತ್ತಾರೆ.

## ತಿದ್ದುಪಡಿ

ಆಗಸ್ಟ 2013ರ ಸ್ವಾಭಿಮಾನಿ ಸಹಕಾರ ಸಂಚಿಕೆಯಲ್ಲಿ ಹಾನಗಲ್ ಆದಿಶಕ್ತಿ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಉದ್ಘಾಟನೆ ಎಂಬುದರ ಬದಲಿಗೆ ಆದರ್ಶ ಸೌಹಾರ್ದ ಸಹಕಾರಿಯ ನೂತನ ಕಟ್ಟಡ ಉದ್ಘಾಟನೆ ಎಂದು ತಪ್ಪಾಗಿ ಮುದ್ರಿತವಾಗಿದೆ ಆದರ್ಶ ಇರುವಲ್ಲಿ ಆದಿಶಕ್ತಿ ಎಂದು ಓದಿಕೊಳ್ಳಲು ಕೋರಿದೆ.

## ಇದನ್ನು ಮರೆಯಬೇಡಿ

ಈ ತಿಂಗಳ 25ನೇ ದಿನಾಂಕದ ಒಳಗಾಗಿ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆ ಮುಕ್ತಾಯವಾಗುತ್ತವೆ. ದಿನಾಂಕ 30ರ ಒಳಗಾಗಿ ಸೌಹಾರ್ದ ಸಹಕಾರಿ ಕಾನೂನು (ಕಲಂ–34) ರೀತ್ಯಾ ಸಹಕಾರಿಗಳ ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಹಕಾರಿಯ ಮಾಹಿತಿಗಳನ್ನು ಕಳುಹಿಸಲು ಮರೆಯಬೇಡಿ.



ಶ್ರೀ ಎಂ.ಜಿ.ಪಾಟೀಲ್ ಅಪರ ನಿಬಂಧಕರು ಸಂಯುಕ್ತ ಸಹಕಾರಿಗೆ ಭೇಟಿ ನೀಡಿದಾಗ ಅಲ್ಪಾವಧಿ ಕೃಷಿಸಾಲ ವ್ಯವಸ್ಥೆಯನ್ನು 2 ಕಂತುಗಳಲ್ಲಿ ಜಾರಿ ಮಾಡುವ ನಬಾರ್ಡ್ ಚಿಂತನೆಯಿಂದ ಆಗುವ ಸಾಧಕ ಹಾಗೂ ಬಾಧಕಗಳ ಬಗ್ಗೆ ಶ್ರೀ ಚೊಕ್ಕಬಸವನಗೌಡ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ನಿರ್ದೇಶಕಲರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರೊಂದಿಗೆ ಚರ್ಚಿಸಿದರು.

# ಮಹಿಳಾ ದೌರ್ಜನ್ಯ ತಡೆ ಹಾಗೂ ಸಂರಕ್ಷಣೋಪಾಯಗಳ ಸಾಮಾಜಿಕ ಜಾಗೃತಿ ತರಬೇತಿ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿನ ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಿಬ್ಬಂದಿಯವರುಗಳಿಗಾಗಿ ಮಹಿಳಾ ದೌರ್ಜನ್ಯ ತಡೆಗಾಗಿ ಸಂರಕ್ಷಣೋಪಾಯಗಳ ಸಾಮಾಜಿಕ ಜಾಗೃತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 11–10–2011ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ.

ಪ್ರತಿನಿಧಿ ಶುಲ್ಕ ರೂ 500/–. ಭಾಗವಹಿಸುವ ಪ್ರತಿನಿಧಿಗಳಿಗೆ ಅವರು ಪ್ರತಿನಿಧಿಸುವ ಸೌಹಾರ್ದ ಸಹಕಾರಿಯಿಂದಲೆ ಪ್ರತಿನಿಧಿ ಶುಲ್ಕ ಹಾಗು ಪ್ರಯಾಣ ವೆಚ್ಚವನ್ನು ಭರಿಸಬೇಕು. ಪ್ರತಿನಿಧಿಗಳಿಗೆ ವಸತಿ,ಊಟ,ಉಪಾಹಾರ ಅಧ್ಯಯನ ಸಾಹಿತ್ಯಗಳನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ಭಾಗವಹಿಸಲು ಅಪೇಕ್ಷಿಸುವವರು ತಮ್ಮ ಹೆಸರು, ಹುದ್ದೆ, ಸಹಕಾರಿಯ ಹೆಸರು ದೂರವಾಣಿ ಸಂಖ್ಯೆ ಇ–ಮೇಲ್ ಐಡಿ ವಿವರಗಳನ್ನು ಹಾಗೂ ಪ್ರತಿನಿಧಿ ಶುಲ್ಕವನ್ನು ಪಾವತಿಸಿ ನೋಂದಾಯಿಸಲು ಕೋರಿದೆ. ಪ್ರತಿನಿಧಿಗಳಿಗೆ ಪ್ರವೇಶ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು.

# ಆದಾಯ ತೆರಿಗೆ : ಸಹಕಾರಿಗಳ ಪರವಾಗಿ ತೀರ್ಪುಗಳು

## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ :

ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.ಬೋರಗಾಂವ ತಾ.ಚಿಕ್ಕೋಡಿ ಜಿಲ್ಲಾ ಬೆಳಗಾವಿ ಇವರಿಗೆ ಆದಾಯ ತೆರಿಗೆ ಇಲಾಖೆಯವರು (Assessment year 2009-10) ಸಾಲಿಗೆ ಸಂಬಂದಿಸಿದಂತೆ ಶ್ರೀ ಅರಿಹಂತ ಸೌಹಾರ್ದ ಸಹಕಾರಿಗೆ 1,03,41,812/– ರೂ.ಗಳ ತೆರಿಗೆಯನ್ನು ವಿಧಿಸಿ 43,14,810/– ರೂ.ಗಳನ್ನು ಪಾವತಿಸಲು ನೀಡಿರುವ ನೋಟೀಸಿನ ಮೇಲೆ ಸಹಕಾರಿಯವರು ಆದಾಯ ತೆರಿಗೆ ಮೇಲ್ಮನವಿ ಆಯುಕ್ತರು ಬೆಳಗಾವಿ ಇವರಲ್ಲಿ ಸಲ್ಲಿಸಿದ ನಂತರ ಮೇಲ್ಮನವಿಯನ್ನು ಆಲಿಸಿದ ಆಯುಕ್ತರು ITA.No.145/BGM/11-12 ದಿನಾಂಕ : 8–8–2013ರಂದು ನೀಡಿದ ತೀರ್ಪಿನನ್ವಯ ಸಹಕಾರಿಗೆ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ದೊರೆತಿದೆ.

## ಶ್ರೀ ವೇಮನ ಸೌಹಾರ್ದ :

ಶ್ರೀ ವೇಮನ ಸೌಹಾರ್ದ ಸಹಕಾರಿ ಬೆಂಗಳೂರು ಇವರ ಕೇಸ್ ITA.NO.1694/Bang/2012 (Assessment Year 2009-10) ಉಲ್ಲೇಖ 180/2013ರ ಪ್ರಕಾರ ದಿನಾಂಕ 26–7–2013ರಂದು ಹೊರಡಿಸಿದ ತೀರ್ಪಿನ ಪ್ರಕಾರ ಈ ಸಹಕಾರಿಯು ರೂ 40,73,260 ಗಳನ್ನು ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆದಿದೆ.

# ಶಿವಮೊಗ್ಗದ ಶ್ರೀ ಶಾರದ ಸೌಹಾರ್ದ ಸಹಕಾರಿಯ ವಿಶೇಷತೆ

ಶ್ರೀ ಶಾರದ ವಿವಿದೋದ್ಧೇಶ ಸೌಹಾರ್ದವು ದಿನಾಂಕ : 24.7.2006ರಂದು ಸ್ಥಾಪನೆಗೊಂಡು ಸಂಯುಕ್ತ ಸಹಕಾರಿಯ ಸಂಪೂರ್ಣ ಸಹಕಾರದೊಂದಿಗೆ ವಿವಿಧ ರೀತಿಯ ಸೇವೆಗಳನ್ನು ತನ್ನ ಸದಸ್ಯರಿಗೆ ನೀಡುತ್ತಾ, ಉತ್ತಮ ರೀತಿಯಲ್ಲಿ ಮುನ್ನಡೆಯುತ್ತಿದೆ. 2012-13 ನೇ ಸಾಲಿನಲ್ಲಿ ಒಟ್ಟು 20,03,651 ರೂಗಳನ್ನು ಲಾಭ ಮಾಡಿ ಒಟ್ಟು 6,59,37,000 ಬಂಡವಾಳ ಹೊಂದಿ 4,29,89000 ಸಾಲ ಮತ್ತು ಮುಂಗಡ ನೀಡಿರುತ್ತದೆ. ಇದಲ್ಲದೆ. ಸಹಕಾರಿಯಲ್ಲಿ ಸ್ಮಾರ್ಟ್ ಶಾಪ್ ,ವೆಸ್ಟ್ರನ್ ಯೂನಿಯನ್,ಮಲ್ಟಿಸಿಟಿ ಚೆಕ್,ಡಿಡಿ ಸೌಲಭ್ಯ,ಛಾಪಾ ಕಾಗದ ಮಾರಾಟ, ಸಿಮೆಂಟ್ ಖರೀದಿ ಮತ್ತು ಮಾರಾಟದಂತಹ ವ್ಯವಹಾರ ಮಾಡಿ ಇತರೆ ಆದಾಯದ ಬಗ್ಗೆ ಗಮನ ಹರಿಸಲಾಗಿದೆ. ಸಹಕಾರಿ ಯಲ್ಲಿ ಹೆಚ್ಚುವರಿ ಸದಸ್ರು ಮಲೆನಾಡಿನವರೇ ಇರುವುದರಿಂದ ಅವರಿಗೆ ಉಪಯೋಗವಾಗಲೆಂದು 2009-10 ರಲ್ಲಿ ಅಡಿಕೆ ದಲ್ಲಾಳಿ ಮಡಿಯನ್ನು ಪ್ರಾರಂಭಿಸಿ ಉತ್ತಮ ಸೇವೆಯನ್ನು ನೀಡುತ್ತಾ ಸದಸ್ಯರಿಗೆ ಒಳ್ಳೆಯ ಬೆಲೆ ಮತ್ತು ಮಾರುಕಟ್ಟೆ ಸೌಲಭ್ಯ ನೀಡುವಲ್ಲಿ ಯಶಸ್ಸು ಕಾಣುತ್ತಾ ಬರುತ್ತಿದೆ. ಈ ಅಡಿಕೆಯನ್ನು ಸಹಕಾರಿ ಸಂಸ್ಥೆಗಳಾದ ಕ್ಯಾಂಪ್ಕೊ ಹಾಪ್‌ಕೋಸ್‌ಗಳು ಖರೀದಿಸುತ್ತಿರುವುದು ಒಂದು ಶ್ಲಾಘನೀಯ.

2009-10ನೇ ಸಾಲಿನಲ್ಲಿ ಸಹಕಾರಿಯು ಕಿರು ಜಲವಿದ್ಯುತ್ ಯೋಜನೆಯ ಬಗ್ಗೆ ಗಮನ ಹರಿಸಿ ಸರ್ಕಾರದಿಂದ ಬರುವ ಸಹಾಯ ಧನದ ಮೊತ್ತಕ್ಕೆ 95,000 ರೂಗಳಂತೆ ಅರ್ಹ ಸದಸ್ಯರಿಗೆ ಸಾಲ ನೀಡಿ ಇದರ ಸಹಾಯ ಧನ ಬಿಡುಗಡೆಯು ಸಹ ಆಗಿದ್ದು, ಇದರ ಉಪಯೋಗವನ್ನು ಈಗಾಗಲೇ ಸಹಕಾರಿಯ ಒಟ್ಟು 340 ಸದಸ್ಯರು ಬಳಸಿಕೊಂಡಿದ್ದು, 230 ಸದಸ್ಯರ ಸಂಪೂರ್ಣ ಸಾಲದ ಮೊತ್ತ ಮರುಪಾವತಿಯಾಗಿರುತ್ತದೆ. ಈ ಯೋಜನೆಗೆ ಮೊದಲ ಬಾರಿಗೆ ಒಂದು ಸಹಕಾರಿ ಸಂಸ್ಥೆ ಸಾಲ ನೀಡಿರುವುದನ್ನು ರಾಜ್ಯ ಸರ್ಕಾರ,







ಕೇಂದ್ರ ಸರ್ಕಾರ ಮತ್ತು ವಿಶ್ವ ಸಂಸ್ಥೆಯು ಸಹ ಗುರುತಿಸಿದೆ ಮತ್ತು ಅನೇಕ ಎನ್‌ಜಿಓ ಸಂಸ್ಥೆಗಳು ಈ ಬಗ್ಗೆ ಸಹಕಾರಿಯಲ್ಲಿ ಸಂದರ್ಶನ ಹಾಗೂ ಸಾಲ ನೀಡುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಂಡು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ ಮತ್ತು ಈ ಯೋಜನೆಗೆ ಅವರ ಸಹಕಾರವನ್ನು ನೀಡುವ ಬಗ್ಗೆ ಭರವಸೆ ನೀಡಿರುತ್ತಾರೆ. ಸಹಕಾರಿಯ ಸದಸ್ಯರಿಗೆ ತತ್‌ಕ್ಷಣದ ಸಹಾಯಕ್ಕಾಗಿಮರಣೊತ್ತರ ಸಹಾಯ ಧನ ನಿಧಿ ಎಂಬ ನಿಧಿಯನ್ನು ಸ್ಥಾಪಿಸಿದ್ದು, ಹಾಲಿ ಸಂದರ್ಭದಲ್ಲಿ ಮೃತ ಸದಸ್ಯರ ಕುಟುಂಬಕ್ಕೆ 10,000/- ರೂಗಳ ಸಹಾಯ ಧನ ನೀಡಲಾಗುತ್ತಿದೆ. ಪ್ರಾರಂಭದಲ್ಲಿ ಸಹಕಾರಿಯ ಅಧ್ಯಕ್ಷರು,ನಿರ್ದೇಕರ ದೃಢ ನಿರ್ಧಾರದ ಕಾರಣ ಸಹಕಾರಿಯು ಈ ಯಶಸ್ವಿಗೆ ಬರಲು ಕಾರಣವಾಗಿದೆ. ಅಲ್ಲದೇ ಸ್ವ ಸಹಾಯ ಸಂಘಗಳನ್ನು ತನ್ನೊಂದಿಗೆ ಸೇರಿಸಿಕೊಂಡು ಅಡಿಕೆ ತರಿಸುವ ಮತ್ತು ಇದಕ್ಕೆ ಅವರಿಗೆ ಸೂಕ್ತ ಕಮಿಷನ್ ನೀಡಿ ಅವರನ್ನು ಆರ್ಥಿಕವಾಗಿ ಮೇಲುತ್ತುವ ಒಂದು ಪ್ರಥಮ ಪ್ರಯತ್ನ ಸಹಕಾರಿಯಿಂದ ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಸಕಾಲ ಹಾಗೂ ಇನ್ನಿತರೆ ಸೌಲಭ್ಯಗಳನ್ನು ನೀಡುವ ಗುರಿಯನ್ನು ಹೊಂದಿರುತ್ತದೆ.

**ಈವರೆಗೆ ಸಾಲ ಪಡೆದ ಒಟ್ಟು ಸದಸ್ಯರು ಮತ್ತು ಮೊತ್ತ :** 340(95,000/-ದಂತೆ) ಸದಸ್ಯರು ಮತ್ತು ಸಾಲ ರೂ.ಮೂರು ಕೋಟಿ ಇಪ್ಪತ್ತೂರು ಲಕ್ಷ.

**ಸಾಲ ಮರುಪಾವತಿ ಮಾಡಿದವರು ಮತ್ತು ಮೊತ್ತ :** 230(1,10,000/-ದಂತೆ) ಸದಸ್ಯರು ಮತ್ತು ಎರಡು ಕೋಟಿ ಐವತ್ತೂರು ಲಕ್ಷ

ಸಾಲ ಮರುಪಾವತಿಯಾದ ನಂತರ ಸದಸ್ಯರಿಗೆ ಸಿಗಬಹುದಾದ ಅಂದಾಜು ಉಳಿಕೆ ಮೊತ್ತ ರೂ.4,000/-

**ಹೆಚ್ಚಿನ ಮಾಹಿತಿಗಾಗಿ :** 08182-221977,9880838430

# 67ನೇ ಸ್ವಾತಂತ್ರ್ಯೋತ್ಸವಾಚರಣೆ








ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಧ್ವಜಾರೋಹಣ ನೆರವೇರಿಸಿದರು. ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕ ಶ್ರೀ ಶಿವು ಕುಲಕರ್ಣಿ ಧ್ವಜಾರೋಹಣ ನೆರವೇರಿಸಿದರು. ಗುಲ್ಬರ್ಗಾ ವಿಭಾಗೀಯ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ಧ್ವಜಾರೋಹಣ ನೆರವೇರಿಸಿದರು. ಈ ಸುಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಹಾಗೂ ವಿಭಾಗೀಯ ಕಛೇರಿಗಳ ಸಿಬ್ಬಂದಿ ವರ್ಗದವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಲ್ಲಿ ನವವಿವಾಹಿತ ದಂಪತಿಗಳಿಗೆ ಶುಭ ಹಾರೈಕೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಲ್ಲಿ ಇತ್ತೀಚೆಗೆ ಮದುವೆಯಾಗಿರುವ ಶ್ರೀಯುತ ಗುರುಪ್ರಸಾದ, ಶ್ರೀಯುತ ಸೂರ್ಯಕಾಂತ ರ್‍ಯಾಕಲೆ ಹಾಗೂ ಶ್ರೀ ಪಾಲರಾಜರವರುಗಳಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ನೇತೃತ್ವದಲ್ಲಿ ಏರ್ಪಡಿಸಿದ ಔತಣಕೂಟವೊಂದರಲ್ಲಿ ಶುಭಹಾರೈಸಿದರು.

## ಷೇರು ಸಂಗ್ರಹ ಅನುಮತಿ ರದ್ದು

ಉದ್ದೇಶಿತ ಖುಷಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತವು ಷೇರು ಸಂಗ್ರಹಣೆ ಮಾಡಿ ಪ್ರಸ್ತಾವೆ ಸಲ್ಲಿಸಿರದ ಕಾರಣ ಸಹಕಾರಿ ಸಂಘಗಳ ನಿಬಂಧಕರ ಕಛೇರಿ ಸಂಖ್ಯೆ: ಆರ್ಎಸ್ಆರ್/ ಸೌಹಾರ್ದ /165/2012-13 ದಿನಾಂಕ 24/08/2013 ರ ಪತ್ರದಲ್ಲಿ ಸದರಿ ಸಹಕಾರಿಯ ನೋಂದಣಿಗೆ ಪ್ರಸ್ತಾವೆ ಬಾರದ ಕಾರಣ ಷೇರು ಸಂಗ್ರಹಣೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆ ಯಲಾಗಿರುತ್ತದೆ. ಇನ್ನು ಮುಂದೆ ಸಾರ್ವ ಜನಿಕರಿಂದ ಹಣ ಸಂಗ್ರಹಿಸದಿರಲು ಸೂಚಿಸಿದೆ ಎಂದು ಡಾ|| ಎನ್.ಎಸ್. ಚನ್ನಪ್ಪಗೌಡ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ, ಬೆಂಗಳೂರುಇವರು ಪತ್ರದ ಮೂಲಕ ತಿಳಿಸಿರುತ್ತಾರೆ.



**ಅಧ್ಯಕ್ಷರ ಭೇಟಿ :** ಭ್ರಮರಾಂಭ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿ ಇಲ್ಲಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರ ರವರು ಬೇಟಿನೀಡಿ ಸಹಕಾರಿಯ ಪ್ರಗತಿಯನ್ನು ಪರಿಶೀಲಿಸಿದರು.



ಕಲ್ಲೋಳಿಯ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ 2012–13ನೇ ಸಾಲಿನ ವಾರ್ಷಿಕ ಮಹಾಸಭೆ







**ಮಹಾಸಭೆ :** ಮಂಗಳೂರು ಸೌಹಾರ್ದ ಸಹಕಾರಿಯ 3ನೇ ಮಹಾಸಭೆ ಇತ್ತೀಚಿಗೆ ನಡೆಸಲಾಯಿತು ಸಹಕಾರಿಯು ವರದಿ ವರ್ಷದಲ್ಲಿ ಒಟ್ಟು ರೂ.7,57,483.80 ನಿವ್ವಳ ಲಾಭ ಗಳಿಸಿದೆ. ಹಾಗೂ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕ್ರೀಡೆಯಲ್ಲಿ ರಾಷ್ಟ್ರೀಯ ವಿಭಾಗಕ್ಕೆ ಆಯ್ಕೆಗೊಂಡವರನ್ನು ಸನ್ಮಾನಿಸಲಾಯಿತು.

## ಗುಲ್ಬರ್ಗಾ ಜಿಲ್ಲೆಯ ಕಮಲಾಪೂರದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ 10ನೇ ತಂಡದ 10 ದಿನಗಳ "ವ್ಯಕ್ತಿತ್ವ ವಿಕಸನ ತರಬೇತಿ" ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಗುಲ್ಬರ್ಗಾ ಜಿಲ್ಲೆಯ ಉತ್ತಮ ನೈಸರ್ಗಿಕ ಹಾಗೂ ಶೈಕ್ಷಣಿಕ ಪರಿಸರದಲ್ಲಿ 2013 ಡಿಸೆಂಬರ್ 2 ನೇ ವಾರದಲ್ಲಿ ನಡೆಸಲು ಉದ್ದೇಶಿಸಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೋರಿದೆ.

**ಕಾರ್ಯಕ್ರದ ಸ್ಥಳ :** "ಪ್ರಕೃತಿ ಜ್ಞಾನ ತರಬೇತಿ ಕೇಂದ್ರ ಮೈರಾಡ್", ಕಮಲಾಪೂರ, ಗುಲ್ಬರ್ಗಾ ಜಿಲೆ. (ಗುಲ್ಬರ್ಗಾದಿಂದ ಹುಮನಾಬಾದ ಮಾರ್ಗವಾಗಿ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ 30 ಕಿ.ಮೀ. ದೂರದಲ್ಲಿದೆ.)

**ತರಬೇತಿ ಶುಲ್ಕ :** ರೂ. 5000/-

**ತರಬೇತಿ ವ್ಯವಸ್ಥೆ :** ವಸತಿ, ಬೆಳಗ್ಗೆ ಕಾಫೀ, ತಿಂಡಿ, ಮಧ್ಯಾಹ್ನ ಹಾಗೂ ರಾತ್ರಿ ಊಟ, ಸಂಜೆ ಕಾಫೀ ತಿಂಡಿ ಅಧ್ಯಯನ ಸಾಹಿತ್ಯ, ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ಉತ್ತಮ ವಿಷಯದ ಬಗ್ಗೆ ಉಪನ್ಯಾಸಗಳು, ಯೋಗ ಶಿಬಿರ, ಆರೋಗ್ಯ ತಪಾಸಣೆ, ಅಧ್ಯಯನ ಪ್ರವಾಸ, ಪ್ರಾಯೋಗಿಕಗಳು ಹಾಗೂ ವ್ಯಕ್ತಿತ್ವ ವಿಕಸನದ ಪೂರಕ ವಿಷಯಗಳು. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.

**ಲಭ್ಯವಿರುವ ಸೀಟುಗಳು :** 50ಮಾತ್ರ ಮೊದಲು ಬಂದವರಿಗೆ ಆದ್ಯತೆ. ತರಬೇತಿ ಶುಲ್ಕ ಪಾವತಿಸಿ ನಿಮ್ಮ ಹೆಸರನ್ನು ನೋಂದಾಯಿಸಿ.

# ಶ್ರೀಗಂಧ ಸೌಹಾರ್ದ ಸಹಕಾರಿಗೆ ನೂತನ ಕಟ್ಟಡ

ಶ್ರೀ ಗಂಧ ಸೌಹಾರ್ದ ಸಹಕಾರಿಯ ಕಟ್ಟಡವನ್ನು ದಿನಾಂಕ 01–09–2013ರಂದು ಮಹಾಲಕ್ಷ್ಮೀ ಲೇಔಟ್ ವಿಧಾನ ಸಭಾಕ್ಷೇತ್ರದ ಶಾಸಕರಾದ ಶ್ರೀ ಮಾನ್ ಕೆ. ಗೋಪಾಲಯ್ಯನವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಈ ಸಭೆಯಲ್ಲಿ ಸನ್ಮಾನ್ಯ ಶ್ರೀ ಹರೀಶ್ ಮಾಜಿ ಉಪ ಮಾಹಾಪೌರರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ಸನ್ಮಾನ್ಯ ಶ್ರೀ ಎಸ್. ಕೇಶವಮೂರ್ತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು ಹಾಗೂ ಸಿಟಿಜನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು, ಸನ್ಮಾನ್ಯ ಶ್ರೀ ಎಸ್.ಆರ್. ಸತೀಶ್‌ಚಂದ್ರ ರವರು ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ಧ ಸಂಯುಕ್ತ ಸಹಕಾರಿ ನಿಯಮಿತ, ಹಾಗೂ ಶ್ರೀ ಬಿ.ಸಿ. ಸತೀಶ್ ಜಂಟಿ ನಿಭಂದಕರು ಬೆಂಗಳೂರು ಜಿಲ್ಲೆ ಇವರುಗಳು ಭಾಗವಹಿಸಿ ಈ ಸಂಸ್ಥೆಯ ಪ್ರಗತಿಯನ್ನು ಪ್ರಸಂಶಿಸಿ, ಮುಂದಿನ ಬೆಳವಣಿಗೆಗೆ ಸೂಕ್ತ ಸಲಹೆಗಳನ್ನು ನೀಡಿದರು. ಪ್ರಮುಖವಾಗಿ ಶ್ರೀ ಎಸ್. ಆರ್. ಸತೀಶ್‌ಚಂದ್ರರವರು ಸಹಕಾರ ರಂಗದಲ್ಲಿ ಇಲ್ಲಿಯವರೆಗೂ ವಿವಿಧ ಸಹಕಾರಿಗಳು ಸಾಧಿಸಿರುವ ಪ್ರಗತಿಯನ್ನು, ಈ ರಂಗದಲ್ಲಿ ಮಾಡಬಹುದಾದ ಕೆಲಸಕಾರ್ಯಗಳನ್ನು, ಸಹಕಾರಿಸಂಘಗಳಿಂದ ತನ್ನ ಸದಸ್ಯರಿಗೆ ಹಾಗೂ ಗ್ರಾಹಕರಿಗೆ ನೀಡಬಹುದಾದ ಸೇವಾ ಸವಲತ್ತುಗಳನ್ನು ಬಗ್ಗೆ ವಿವರವಾಗಿ ಎಳೆಎಳೆಯಾಗಿ ಸಭಿಕರ ಮನ ಮುಟ್ಟುವಂತೆ ವಿವರಿಸಿದರು. ಈ ಸಂಸ್ಥೆಯ



ಅಧ್ಯಕ್ಷರಾದ ಶ್ರೀ ವೀರಕಾತಯ್ಯನವರು ಅಧ್ಯಕ್ಷತೆ ವಹಿಸಿದ್ದರು ಮಾಡಿದ್ದರು ಈ ಕಾರ್ಯಕ್ರಮದ ನಿರೂಪಣೆ ಹಾಗೂ ಸ್ವಾಗತವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ. ಎಂ ಚಿಕ್ಕೀರಪ್ಪನವರು ನಿರ್ವಹಿಸಿದರು ಶ್ರೀ ಕೆ. ಗೋವಿಂದಯ್ಯನವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಯಿತು. 2012–13ನೇ ಸಾಲಿಗೆ ಒಟ್ಟು ರೂ 49,00,000/– ಲಕ್ಷ ನಿವ್ವಳ ಲಾಭಗಳಿಸಿ ಸದರಿ ಸಾಲಿಗೆ ಶೇಕಡ 12% ಡಿವಿಡೆಂಟ್ ನೀಡಲು ಉದ್ದೇಶಿಸಲಾಗಿದೆ.

# ದಿ ಪಾವಗಡ ವಿವಿಧೋದ್ದೇಶ ಸಹಕಾರಿಯ ಸಿಬ್ಬಂದಿಯ ಅಧ್ಯಯನ ಪ್ರವಾಸ



ಶಿರಸಿಯ ಪ್ರವಾಸದಲ್ಲಿದ್ದಾಗ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರೊಂದಿಗೆ.

ದಿ ಪಾವಗಡ ವಿವಿಧೋಧ್ದೇಶ ಸಹಕಾರಿಯ ಸಿಬ್ಬಂದಿಯವರು ದಿನಾಂಕ : 21–07–2013 ರಿಂದ 25–07–2013ರವರೆಗೆ ರಾಜ್ಯದ ಶಿವಮೊಗ್ಗ, ಉತ್ತರಕನ್ನಡ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ 14 ಶಾಖೆಗಳ ವ್ಯವಸ್ಥಾಪಕರು ಹಾಗೂ ಅಧಿಕಾರಿಗಳನ್ನೊಳಗೊಂಡ ಸುಮಾರು 32 ಸದಸ್ಯರ ತಂಡವು ಸಾಗರದ 'ಸುವಿಧಾ', ಸಿರ್ಸಿಯ 'ಕದಂಬ ಮಾರ್ಕೆಟಿಂಗ್', 'ತೋಟಗಾರ್ಸ್ ಕೋ–ಆಪರೇಟಿವ್', ಧಾರವಾಡದ 'ವಿಜಯಲಕ್ಷ್ಮೀ ಸೌಹಾರ್ದ', ಬೈಲಹೊಂಗಲದ 'ರಾಣಿ ಚನ್ನಮ್ಮ, ಯಕ್ಸಂಬಾದ 'ಶ್ರೀ ಬೀರೇಶ್ವರ ಸೌಹಾರ್ದ', ಬೋರ್ಗಾಂವ್‌ನ 'ಹರಿಹಂತ ಸೌಹಾರ್ದ', ಸಹಕಾರಿಗಳಿಗೆ ಭೇಟಿ ನೀಡಿ ಸದರಿ ಸೌಹಾರ್ದಗಳ ಅಧ್ಯಕ್ಷರುಗಳು, ನಿರ್ದೇಶಕರುಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಸಿಬ್ಬಂಧಿ ವರ್ಗದವರೊಂದಿಗೆ ಚರ್ಚೆಯ ಮೂಲಕ ಅವರ ಸಹಕಾರಿಗಳ ಕಾರ್ಯಚಟುವಟಿಕೆ, ನೀತಿ–ನಿಯಮ, ಲೆಕ್ಕಪತ್ರಗಳ ನಿರ್ವಹಣೆ, ಆಡಳಿತಾತ್ಮಕ ವಿಚಾರಂಗಳು, ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ ಇನ್ನೂ ಹತ್ತುಹಲವಾರು ವಿಚಾರಗಳ ಬಗ್ಗೆ ಮಾಹಿತಿ ಪಡೆಯಲಾಗಿದೆ.

ಅಧ್ಯಯನ ಪ್ರವಾಸ ಸಿಬ್ಬಂದಿಯಲ್ಲಿ ಹೊಸ ಹೊಸ ವಿಚಾರಗಳನ್ನು ತಿಳಿಯಲು ಸಹಕಾರಿಯಾಯಿತು ನಮ್ಮ ಸಿಬ್ಬಂದಿಯವರಲ್ಲಿ ಹೊಸ ಉತ್ಸಾಹಮೂಡಿಸಿದೆ ಎಂದು ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಶ್ರೀನಾಥರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರ್ಥಿಕ ನಿರ್ವಹಣೆ : ಇಂದಿನ ತುರ್ತು ಅಗತ್ಯ

ಪ್ರತಿದಿನವೂ ಏರಿಕೆ ಕಾಣುತ್ತಿರುವ ಹಣದುಬ್ಬರವು ಆರ್ಥಿಕ ಹಿಂಜರಿತದ ಭಿತಿಯನ್ನುಂಟು ಮಾಡುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರತಿಯೊಂದು ಸಂಘ-ಸಂಸ್ಥೆಗಳು, ಸಹಕಾರಿಗಳು ಸೂಕ್ತ ಆರ್ಥಿಕ ನಿರ್ವಹಣೆಯನ್ನು ನಡೆಸಬೇಕಾಗಿರುವುದು ಅತ್ಯವಶ್ಯವಾಗಿದೆ. ನಾವು ಸೀಮಿತ ಮಾರುಕಟ್ಟೆಯ ಕಾಲದಿಂದ ಬಹುದೂರ ಸಾಗಿ ಬಂದಿದ್ದು ಈಗ ವಿಶ್ವವೇ ಮಾರುಕಟ್ಟೆಯಾಗಿದೆ. ಯಾವುದೋ ದೇಶದಲ್ಲಿ ಸಂಭವಿಸುವ ಆರ್ಥಿಕ ಹಿಂಜರಿತವು ನಮಗೆ ನೇರ ಪರಿಣಾಮವನ್ನುಂಟು ಮಾಡಬಹುದು ಹಾಗೆಯೇ ನಮ್ಮಲ್ಲಿನ ಆರ್ಥಿಕ ಬದಲಾವಣೆಗಳು ಮತ್ಯಾವುದೋ ದೇಶಕ್ಕೆ ಲಾಭ ಅಥವಾ ನಷ್ಟವನ್ನುಂಟು ಮಾಡಬಹುದು. ಇಂತಹ ಸಂದರ್ಭದಲ್ಲಿ ನಮ್ಮನ್ನು ಅಪಾಯದಿಂದ ಬಹುಮಟ್ಟಿಗೆ ಸಂರಕ್ಷಿಸುವ ಸಾಧನವೇ ಆರ್ಥಿಕ ನಿರ್ವಹಣೆ.

ಏನಿದು ಆರ್ಥಿಕ ನಿರ್ವಹಣೆ? – ಸಂಸ್ಥೆಯ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ವಿವಿಧ ರೀತಿಯ ಆರ್ಥಿಕ ಸಂಪನ್ಮೂಲಗಳು ಹಾಗೂ ಖರ್ಚಿನ ಕುರಿತಾದ ಯೋಜನಾಬದ್ಧ ಕಾರ್ಯರೂಪವೇ ಆರ್ಥಿಕ ನಿರ್ವಹಣೆ (Financial Management). ಇದಿಷ್ಟೆ ಅಲ್ಲದೇ ಎಲ್ಲ ರೀತಿಯ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವುದು ಹಾಗೂ ನಿರ್ದೇಶಿಸುವುದು ಸಹ ಆರ್ಥಿಕ ನಿರ್ವಹಣೇಯ ಭಾಗವೇ ಆಗಿದೆ.

## ಆರ್ಥಿಕ ನಿರ್ವಹಣೆ ಹೇಗೆ?

1. **ಹಣಕಾಸಿನ ಅಗತ್ಯತೆಗಳನ್ನು ನಿರ್ಧರಿಸುವುದು :** ಅಂದರೆ ಸಂಸ್ಥೆಯ ಸದ್ಯದ ಹಾಗೂ ಭವಿಷ್ಯತ್ತಿನ ಎಲ್ಲಾ ರೀತಿಯ ಹಣಕಾಸಿನ ಅಗತ್ಯತೆಗಳನ್ನು ಕುರಿತು ಅಂದಾಜಿಸುವುದು ಆರ್ಥಿಕ ನಿರ್ವಹಣೆಯ ಮೊದಲ ಕಾರ್ಯವಾಗಿರುತ್ತದೆ.
2. **ಹಣಕಾಸಿನ ಮೂಲಗಳ ಸಂಶೋಧನೆ :** ಯಾವ-ಯಾವ ಮೂಲಗಳಿಂದ ಸಂಸ್ಥೆಯು ತನ್ನ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು ಎಂಬುದರ ಕುರಿತಾದ ಮಾಹಿತಿ ಸಂಗ್ರಹಿಸುವುದು.
3. **ಆರ್ಥಿಕ ಚಟುವಟಿಕೆಗಳ ನಿಯಂತ್ರಣ :** ಸಂಸ್ಥೆಯು ತನ್ನ ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಕಾಲ-ಕಾಲಕ್ಕೆ ವಿಶ್ಲೇಷಣೆ ನಡೆಸುವುದು ಮತ್ತು ಲೋಪ ದೋಷಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು. ಈ ಮೂಲಕ ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸುವುದು ಈ ವಿಭಾಗದಲ್ಲಿ ಬರುತ್ತದೆ.
4. **ಸೂಕ್ತ ಹೂಡಿಕೆ ನಿರ್ಧಾರ :** ಅನೇಕ ಸಂಘ-ಸಂಸ್ಥೆಗಳು ಶೇರುದಾರರಿಂದ ಪಡೆದ ಹಣವನ್ನು ಸರಿಯಾದ ರೀತಿಯಲ್ಲಿ ಹೂಡಿಕೆ ಮಾಡುವುದರಲ್ಲಿ ವಿಫಲರಾಗಿ ಸಂಸ್ಥೆಯ ಹಾಗೂ ಸದಸ್ಯರ ನಷ್ಟಕ್ಕೆ ಗುರಿಯಾಗುತ್ತವೆ. ಹೂಡಿಕೆ ಕುರಿತಾದ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಅತಿ ಹೆಚ್ಚಿನ ಮುತುವರ್ಜಿವಹಿಸುವುದು ಮತ್ತು ಆಕರ್ಷಕ ಸ್ಕೀಮ್‌ಗಳ ಬಲೆಗೆ ಬೀಳದೆ ಭದ್ರತೆ ಮತ್ತು ಲಾಭ ನಿಡುವಂತಹ ಹೂಡಿಕೆಗಳನ್ನು ಮಾಡುವುದು ಈ ವಿಭಾಗದಲ್ಲಿ ಬರುತ್ತದೆ.
5. **ಲಾಭ ಮತ್ತು ಲಾಭಾಂಶ ವಿಂಗಡಣೆ :** ಎಲ್ಲ ಸಂಸ್ಥೆಗಳು ಕೇವಲ ಲಾಭ ಗಳಿಸುವುದರತ್ತ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ. ಆದರೆ ಸೂಕ್ತ ಆರ್ಥಿಕ ನಿರ್ವಹಣೆಯಲ್ಲಿ ಲಾಭ ಗಳಿಸುವಷ್ಟೆ ಪ್ರಮುಖ ಸ್ಥಾನವವನ್ನು ಗಳಿಸಿದ ಲಾಭದ ಸೂಕ್ತ ರೀತಿಯ ಹಂಚಿಕೆ ಮಾಡುವುದು ಕೂಡ ಸೇರಿರುತ್ತದೆ. ಲಾಭದ ಹಂಚಿಕೆಯನ್ನು ಯಾವ ರೀತಿಯಲ್ಲಿ (ನಗದಿನ ರೂಪದಲ್ಲಿ, ಶೇರುಗಳ ರೂಪದಲ್ಲಿ ಅಥವಾ ಇತರೆ ವಿಧಾನಗಳಲ್ಲಿ) ಮಾಡಬೇಕೆಂಬುದನ್ನು ನಿರ್ಧರಿಸುವುದು ಕೂಡ ಮುಖ್ಯ. ಲಾಭದ ಕುರಿತಾದ ಮತ್ತೊಂದು ಪ್ರಮುಖ ಅಂಶವೆಂದರೆ ಲಾಭದ ಯಾವ ಪ್ರಮಾಣವನ್ನು ಕಾಯ್ದಿಟ್ಟ ನಿಧಿಯಾಗಿ ಸಂಗ್ರಹಿಸಬೇಕು ಮತ್ತು ಯಾವ ಪ್ರಮಾಣವೂ ಹಂಚಿಕೆಗೆ ಲಭ್ಯ ಎಂಬುದನ್ನು ನಿರ್ಧರಿಸುವುದು. ಸೌಹಾರ್ದ ಸಹಕಾರಿಯ ಕಾಯ್ದೆಯಲ್ಲಿಯೇ ಈ ಕುರಿತಾದ ಪ್ರಾವಿಧಾನ ಇರುವುದು ಸಹಕಾರಿಗಳ ಆರ್ಥಿಕ ಬಲಿಷ್ಠತೆಗೆ ಕಾರಣವಾಗಿದೆ.
6. **ಆಸ್ತಿಗಳ ಖರೀದಿ :** ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಮೇಲಿನ ಹೂಡಿಕೆ ಪ್ರಮಾಣವನ್ನು ನಿರ್ಧರಿಸುವುದು ಈ ವಿಭಾಗದಲ್ಲಿ ಬರುತ್ತದೆ. ಸಂಸ್ಥೆಗಳು ಸುಲಭವಾಗಿ ನಗದಾಗಿ ಪರಿವರ್ತಿಸಬಹುದಾದ ಆಸ್ತಿಗಳಲ್ಲಿ ಹೆಚ್ಚಿನ ಹೂಡಿಕೆ ಮಾಡುವುದು ಭದ್ರತೆಯ ದೃಷ್ಟಿಯಿಂದ ಮುಖ್ಯವಾಗಿರುತ್ತದೆ.

## ಆರ್ಥಿಕ ನಿರ್ವಹಣೆಯ ಉದ್ದೇಶಗಳು :

- ಹಣಕಾಸಿನ ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸುವುದು.
- ಇನ್ನೂ ಹೆಚ್ಚಿನ ಸಂಪತ್ತಿನ ಸೃಷ್ಟಿ.
- ಹೂಡಿಕೆಗಳ ಮೇಲಿನ ನಿಯಂತ್ರಣ ಮತ್ತು ನಿರ್ಧಾರ ಸಾಮರ್ಥ್ಯ ಪಡೆಯುವುದು.
- ಆರ್ಥಿಕ ಹಿಂಜರಿತಗಳನ್ನು ಎದುರಿಸುವ ಕ್ಷಮತೆಯನ್ನು ಗಳಿಸುವುದು.
- ಸದಸ್ಯರ ಮತ್ತು ಶೇರುದಾರರ ಹಿತಾಸಕ್ತಿಯನ್ನು ಕಾಯುವುದರೊಂದಿಗೆ ಆರ್ಥಿಕ ಭದ್ರತೆ ಒದಗಿಸುವುದು.

ಪ್ರತಿಯೊಂದು ವಸ್ತುವಿನ ಬೆಲೆಯೂ ಗಗನಮುಖಿಯಾಗಿರುವ ಮತ್ತು ಆದಯದ ಮೂಲಗಳು ಸೀಮಿತವಾಗಿರುವ ಇಂದಿನ ದಿನಗಳಲ್ಲಿ ಸರಿಯಾದ ಆರ್ಥಿಕ ನಿರ್ವಹಣೆಯು ಕೇವಲ ಸಂಘ-ಸಂಸ್ಥಗಳಷ್ಟೇ ಅಲ್ಲದೆ ಪ್ರತಿಯೊಬ್ಬ ಜನ ಸಾಮಾನ್ಯರ ಅಗತ್ಯವಾಗಿದೆ. ವಿವಿಧ ಆದಾಯದ ಮೂಲಗಳನ್ನು ಗುರುತಿಸುವುದು ಹಾಗೂ ಅದಕ್ಕೆ ತಕ್ಕಂತೆ ಖರ್ಚನ್ನು ನಿಭಾಯಿಸುವುದಕ್ಕಾಗಿ ಯೋಜನಾಬದ್ಧ ಆರ್ಥಿಕ ನಿರ್ವಹಣೆಯನ್ನು ಪ್ರತಿಯೊಬ್ಬರೂ ರೂಡಿಸಿಕೊಳ್ಳಬೇಕಿದೆ.

– ಸ್ವಾನಂದ ಹೆಗಡೆ



# ನೀರ ತೆರಿಗೆ ಸಂಹಿತೆ – ಮಹಿಳಾ ಸಬಲೀಕರಣ



▶▶ ಶ್ರೀಮತಿ ಮಂಜುಳಾ ಪಾಟೀಲ್

ಶ್ರೀಮತಿ ಮಂಜುಳಾ ಪಾಟೀಲ್‌ರವರು ಅನುಭವಿ ಮಹಿಳಾ ಸಹಕಾರಿಗಳು. ರಾಯಚೂರು ಜಿಲ್ಲೆಯ ಕಿರಣ ಸ್ವಸಹಾಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು. ಸಹಕಾರ ಕ್ಷೇತ್ರದ ಮೂಲಕ ಈ ದೇಶದ ಅಭಿವೃದ್ಧಿ ಸಾಧ್ಯ ಎಂದು ದೃಢವಾಗಿ ನಂಬಿರುವವರು. ಸಹಕಾರ ಕ್ಷೇತ್ರಕ್ಕೆ ನೇರ ತೆರಿಗೆಯನ್ನು ಜಾರಿಮಾಡಲು ಹೊರಟಿರುವ ಕೇಂದ್ರ ಸರಕಾರದ ನಿಲವನ್ನು ಬಲವಾಗಿ ಖಂಡಿಸುವ ಶ್ರಿಯುತರು ಮಹಿಳೆಯರ ಆರ್ಥಿಕ ಪ್ರಗತಿ ಬಗ್ಗೆಯೂ ಬಹಳ ಕಳಕಳಿಯನ್ನು ಹೊಂದಿದ್ದಾರೆ. ಅನೇಕ ಸ್ವಸಹಾಯ ಗುಂಪುಗಳನ್ನು ಹುಟ್ಟುಹಾಕಿದ್ದಾರೆ. ಅನೇಕ ಸಹಕಾರಿ ಸಂಸ್ಥೆಗಳಲ್ಲಿ ಉತ್ತಮ ಮಹಿಳಾ ಸಹಕಾರಿಯಾಗಿ ಗುರುತಿಸಿಕೊಂಡಿದ್ದಾರೆ. ಈ ಎರಡು ವಿಷಯಗಳ ಬಗ್ಗೆ ಒದುಗರಲ್ಲಿ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿರುತ್ತಾರೆ.

### ಸಹಕಾರಿ ಕ್ಷೇತ್ರದ ಕುಸಿತ, ದೇಶದ ಪ್ರಗತಿ ಕ್ಷೀಣ :

ನಮ್ಮ ದೇಶದಲ್ಲಿ ಸಹಕಾರಿ ಕ್ಷೇತ್ರಕ್ಕೆ 109 ವರುಷಗಳ ಇತಿಹಾಸದಿಂದ ದೇಶದ ಮೊಟ್ಟ ಮೊದಲ ಸಹಕಾರಿ ನಮ್ಮ ಭಾಗದ ಗದಗ ತಾಲೂಕಿನ ಕಣಗಿನಹಾಳದಲ್ಲಿ ಪ್ರಾರಂಭವಾಗಿದ್ದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಬ್ರಿಟಿಷರ ಕಾಲದ ಆಳ್ವಿಕೆಯಲ್ಲೂ ಸಹಕಾರಿ ಸಂಸ್ಥೆ ಹುಟ್ಟು ಹಾಕಿ, ಗ್ರಾಮಾಂತರ ಪ್ರದೇಶದ ಜನರಿಗೆ ಸಹಾಯ ಹಸ್ತ ನೀಡಿದ ಹೆಗ್ಗಳಿಕೆ ನಮ್ಮ ಕರ್ನಾಟಕಕ್ಕೆ ಸೇರುತ್ತದೆ.

ನಮ್ಮ ದೇಶ ಹಳ್ಳಿಗಳ ನಾಡು, ಹಳ್ಳಿಗಳ ಬೆಳವಣಿಗೆಯಿಂದಲೇ ನಮ್ಮ ದೇಶ "ರಾಮ ರಾಜ್ಯ" ಆಗಲು ಸಾಧ್ಯ ಎಂದು ಗಾಂಧೀಜಿ ಸಾರಿದರು. ಅವರ ಕನಸನ್ನು ಸ್ವಾತಂತ್ರ್ಯ ಬಂದು 67 ವರ್ಷಗಳು ಕಳೆದರೂ ನಮ್ಮಿಂದ ನನಸು ಮಾಡಲು ಆಗಿಲ್ಲ. ಇಂಥ ಸಂದರ್ಭದಲ್ಲಿ ಸಹಕಾರಿ ಕ್ಷೇತ್ರವು ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಕಷ್ಟ ಸುಖಗಳಲ್ಲಿ ಸ್ಪಂದಿಸುವ ಒಂದು ಒಳ್ಳೆಯ ಕ್ಷೇತ್ರ. ಈ ಕ್ಷೇತ್ರದಿಂದ ಆರ್ಥಿಕ ಅಭಿವೃದ್ಧಿಯಲ್ಲದೆ, ಹಸಿರು ಕ್ರಾಂತಿ, ಕ್ಷೀರಕ್ರಾಂತಿ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ. ಇದೆಲ್ಲವನ್ನು ಗಮನಿಸಿ 2012ನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಘೋಷಿಸಿ, ಸಂಭ್ರಮದಿಂದ ಆಚರಿಸಿರುವುದು ಸ್ವಾಗತಾರ್ಹ: ಸಹಕಾರಿಗಳೆಲ್ಲರಿಗೂ ಗೌರವದ ಸಂಭ್ರಮ.

ಇಂಥ ಸಂತೋಷದ ಸಂಭ್ರಮದಲ್ಲಿ ಕೇಂದ್ರ ಸರ್ಕಾರವು "ನೇರ ತೆರಿಗೆ ಸಂಹಿತೆಯನ್ನು" ಸಹಕಾರಿಗಳಿಗೆ ತರುವ ಚಿಂತನೆಯನ್ನು ನಡೆಸಿದೆ ಎಂಬ ವಿಷಯ ವಿಷಾದಕರವಾದದ್ದು. ಏಕೆಂದರೆ ನಮ್ಮ ಸಹಕಾರಿಗಳಿಗೆ ಕೇಂದ್ರ ಬಿಂದು ಹಳ್ಳಿಗಳ ರೈತ ಜನ. ಈ ಜನ ಎಷ್ಟೋ ಕಷ್ಟ ಪಟ್ಟು ದುಡಿದು, ಹಣವನ್ನು ಸಂಗ್ರಹಿಸಿ, ಷೇರು ಹಾಕಿ ಮತ್ತು ಉಳಿತಾಯ ಮಾಡಿ, ಸಹಕಾರಿ ಸಂಸ್ಥೆಗಳ ಹುಟ್ಟಿಗೆ ಕಾರಣರಾಗಿರುತ್ತಾರೆ.

ಇದು ಶ್ರೀಮಂತರ ಬಡ್ಡಿ ವ್ಯವಹಾರಕ್ಕೆ ಕಡಿವಾಣ ಹಾಕಲು ನಾಂದಿಯಾಗುತ್ತದೆ. ಇಂಥ ಸಂಸ್ಥೆಗಳಿಗೆ 33% ತೆರಿಗೆ ವಿಧಿಸಿದರೆ, ಸರ್ಕಾರವೇ ಜನರನ್ನು ಶೋಷಿಸಿದಂತಾಗುತ್ತದೆ. ಇದರಿಂದ ಸ್ವಾಯತ್ತತೆಯನ್ನು ಕಸಿದುಕೊಂಡದ್ದಲ್ಲದೆ, ಜನರನ್ನು ಸ್ವಾಭಿಮಾನದ ಬದುಕಿನಿಂದ ದೂರ ಸರಿಸಿದಂತಾಗುತ್ತದೆ.

ಆದ್ದರಿಂದ ಈ ತೆರಿಗೆಯ ಬದಲಾಗಿ, ಸಾರ್ವಜನಿಕ ನಿಧಿ ಎಂದು ಸಹಕಾರಿಗಳಲ್ಲಿ ಮಾಡಿ ಆ ಹಣದಿಂದ ಆ ಸಹಕಾರಿಯ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕ ಕೆಲಸ ಮಾಡುವುದರಿಂದ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಅರ್ಥ ಸಾರ್ಥಕ ಮಾಡಿದಂತಾಗುತ್ತದೆ. ತೆರಿಗೆ ಪಡೆದು ಸರಕಾರ ಮಾಡುವುದು ಇದೇ ಸಾರ್ವಜನಿಕ ಕೆಲಸ ಅಲ್ಲವೇ? ಅದರ ಬದಲು ಅವರ ಸಾರ್ವಜನಿಕ ಕೆಲಸಗಳನ್ನು ಅವರಿಗೆ ಮಾಡಲು ಬಿಟ್ಟರೆ, ತಮ್ಮ ಕ್ಷೇತ್ರದ ಅಭಿಮಾನದಿಂದ ಸರಕಾರ ಮಾಡುವ ಕೆಲಸಕ್ಕಿಂತ ಒಳ್ಳೆಯ ಗುಣಮಟ್ಟದ ಕೆಲಸಗಳಾಗುತ್ತವೆ. ಹಣ ಸೋರಿ ಹೋಗುವುದು ನಿಲ್ಲುತ್ತದೆ. ಭ್ರಷ್ಟಾಚಾರ ತಡೆಗಟ್ಟಿದಂತಾಗುತ್ತದೆ. ಏಕೆಂದರೆ ಅಲ್ಲಿ ಸಂಸ್ಥೆಯ ಗೌರವ ಮುಖ್ಯವಾಗಿರುತ್ತದೆ. ಕೆಳಮಟ್ಟದ ಕೆಲಸ ಮಾಡಿದರೆ ಸಹಕಾರಿ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ ಎಂಬ ಅಳುಕು ಅವರಲ್ಲಿ ಕಾಡುತ್ತಿರುತ್ತದೆ. ಆದ್ದರಿಂದ ಸಾರ್ವಜನಿಕ ನಿಧಿಯಿಂದ ಮಾಡಿದ ಕೆಲಸ ಒಳ್ಳೆಯ ಗುಣಮಟ್ಟದ್ದಾಗಿರುತ್ತೆ. ಇದೇ ವ್ಯವಸ್ಥೆ ಮುಂದುವರಿದರೆ ನಮ್ಮ ದೇಶ "ರಾಮರಾಜ್ಯ" ಆಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಸಾರ್ವಜನಿಕ ವಿಷಯಕ್ಕೆ ಸಂಬಂಧಿಸಿದ್ದು.

## ಮಹಿಳಾ ಸಬಲೀಕರಣ

ಇನ್ನು ಸ್ತ್ರೀಯರ ವಿಷಯಕ್ಕೆ ಬಂದಾಗ "ಸ್ತ್ರೀ ಶಕ್ತಿ" ಗುಂಪುಗಳನ್ನು ಮಾಡಿ, ಕಡಿಮೆ ದರದಲ್ಲಿ ಬಡ್ಡಿ, ಸಾಲದಲ್ಲಿ ವಿನಾಯಿತಿಯನ್ನು ಘೋಷಿಸಿ, ಅಬಲೆ ಮಹಿಳೆಯರನ್ನು ಸಬಲೆಯರನ್ನಾಗಿ ಮಾಡುತ್ತೇವೆ ಎಂದು ಸರಕಾರ ಹೆಮ್ಮೆಯಿಂದ ಪ್ರಚಾರಗಿಟ್ಟಿಸಿಕೊಳ್ಳುತ್ತದೆ. ಆದರೆ, ಅದೇ ಮಹಿಳೆ ಒಂದು ಹೆಜ್ಜೆ ಮುಂದೆ ಇಟ್ಟು, ಸ್ವಾಭಿಮಾನದ ಬದುಕಿಗಾಗಿ ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಿ, ತಮ್ಮ ವ್ಯವಹಾರಗಳನ್ನು ತಾವೇ ನಡೆಸಿಕೊಂಡು ಹೋದರೆ ಅದೇ ಸರಕಾರವು ಸಹಕಾರಿಗಳಿಗೆ ಸಾಲವೂ ನೀಡದೆ, ಜೊತೆಗೆ ತೆರಿಗೆ ಹೇರುತ್ತೇವೆ ಎನ್ನುವುದು ಯಾವ ನ್ಯಾಯ?

"ಸ್ತ್ರೀ ಶಕ್ತಿ" ಗುಂಪು ಮಾಡಿದವರು ಮಾತ್ರ ಮಹಿಳೆಯರೇ ಸಹಕಾರಿ ಸಂಸ್ಥೆಗಳಲ್ಲಿ ಇದ್ದವರು ಮಹಿಳೆಯರಲ್ಲವೇ? ಇದನ್ನು ನಮ್ಮ ಸರಕಾರಕ್ಕೆ ಮನದಟ್ಟು ಮಾಡುವುದು ಹೇಗೆ? ಎಲ್ಲಾ ರಾಜಕೀಯ ಪಕ್ಷಗಳು "ಸ್ತ್ರೀ ಶಕ್ತಿ" ಗುಂಪಿನ ನೆಪದಲ್ಲಿ ಮಹಿಳೆಯರನ್ನು ತಮ್ಮ ಅಧೀನದಲ್ಲಿ ಇರಲು ಬಯಸುವವರೆ. ಯಾವ ಸರಕಾರವೂ ಸಾರ್ವಜನಿಕರನ್ನು ಸ್ವಾಭಿಮಾನಿಗಳನ್ನಾಗಿ ಮಾಡಲು ಬಯಸುವುದಿಲ್ಲ. ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಿದ್ದ ಮಹಿಳೆಯರೆಲ್ಲ ಶ್ರೀಮಂತರಲ್ಲ. ಅಲ್ಲಿಯೂ 75% ಬಡ ಮಹಿಳೆಯರಿದ್ದಾರೆ. ಸಹಕಾರಿ ಸಂಸ್ಥೆಗಳಿಂದ ಎಷ್ಟೋ ಜನ ಮಹಿಳೆಯರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ, ಮದುವೆಗೆ, ಅನಾರೋಗ್ಯವಾದಾಗ ಮತ್ತು ಸ್ವಂತ ವ್ಯವಹಾರಕ್ಕೆ ಅನುಕೂಲ ಮಾಡಿಕೊಂಡಿದ್ದಾರೆ. ಸರಕಾರ ಮಾಡುವ ಕೆಲಸದಲ್ಲಿ 50% ಕೆಲಸಗಳನ್ನು ಸಹಕಾರಿ ಕ್ಷೇತ್ರವೇ ದೇಶಕ್ಕೆ ಮಾಡಿಕೊಟ್ಟಿದೆ. ಸಹಕಾರಿ ಸಂಸ್ಥೆಗಳು ಹುಟ್ಟುವುದರಿಂದ ಎಷ್ಟೋ ಜನರಿಗೆ ಉದ್ಯೋಗ ಸಿಗುತ್ತದೆ. ಅಲ್ಲದೇ ಸಹಕಾರಿ ಸಂಸ್ಥೆಗಳಿಂದ ಅದರಲ್ಲಿದ್ದ ಸದಸ್ಯರೆಲ್ಲರೂ ಒಂದೇ ಎಂಬ ಭಾವ ಮೂಡುತ್ತದೆ. ಕಲಹಗಳು ತಪ್ಪುತ್ತವೆ. ಪ್ರೀತಿಯ ಬದುಕು ಮತ್ತು ಒಳ್ಳೆಯ ಸಂಸ್ಕಾರ ಬರುತ್ತದೆ. ಈ ಸವಲತ್ತುಗಳನ್ನು ಯಾವ ಸರಕಾರವೂ ಸಾಲಗಳ ವಿನಾಯಿತಿ ಮತ್ತು ಕಡಿಮೆ ಬಡ್ಡಿ ಮಾಡುವುದರಿಂದ ಸಿಗುವುದಿಲ್ಲ. ಅದರಿಂದ ಜನರು ಸೋಮಾರಿಗಳಾಗುತ್ತಾರೆ. ಆದ್ದರಿಂದ ಸರಕಾರವು ತೆರಿಗೆ ವಿಧಿಸದೆ, ಸಣ್ಣ ಸಣ್ಣ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಅನುಕೂಲ ಮಾಡಿಕೊಡುವುದಲ್ಲದೆ, ಹೊಸ ಹೊಸ ಸಂಸ್ಥೆಗಳ ಹುಟ್ಟಿಗೆ ಅನುವು ಮಾಡಿಕೊಡಬೇಕು. ಒಂದು ವೇಳೆ ಈ ತೆರಿಗೆ ಜಾರಿಗೆ ಬಂದದ್ದೆ ಆದರೆ ಹಳ್ಳಿಗಳಲ್ಲಿ ಇದ್ದ ಸಣ್ಣ ಸಣ್ಣ ಸಹಕಾರಿಗಳು ಮುಚ್ಚುತ್ತವೆ. ಹೊಸ ಸಂಸ್ಥೆಗಳು ಹುಟ್ಟುವುದು ಕಡಿಮೆಯಾಗುತ್ತದೆ. ಇದರಿಂದ ಬಂಡವಾಳಶಾಹಿ ಧೋರಣೆ ಇನ್ನು ಹೆಚ್ಚುತ್ತಾ ಹೋಗುತ್ತದೆ. ಆಗ ಸರಕಾರ ಹೇಳುವ ಸಮಾನತೆ ಎಲ್ಲಿ? "ರಾಮರಾಜ್ಯ"ದ ಕನಸು ಎಲ್ಲಿ? ಸಹಕಾರಿ ಕ್ಷೇತ್ರದಲ್ಲಿ ಕುಸಿತ ಪ್ರಾರಂಭವಾದರೆ, ದೇಶದ ಪ್ರಗತಿ ಕ್ಷೀಣಿಸುತ್ತಾ ಹೋಗುತ್ತದೆ. ಆದ್ದರಿಂದ ಸರಕಾರವು ಈ ತೆರಿಗೆ ಬಗ್ಗೆ ಚಿಂತನೆ ನಡೆಸಿ, ತೆರಿಗೆ ಜಾರಿಗೆ ಬರದಂತೆ ನೋಡಿಕೊಳ್ಳಬೇಕು. ಇದರಿಂದ ದೇಶದ ಅಭಿವೃದ್ಧಿ ಮತ್ತು ಜನ ಸಾಮಾನ್ಯರ ಏಳ್ಗೆಯಾಗುತ್ತದೆ. ▪



# ಸಹಕಾರ ಚುನಾವಣಾ ಆಯೋಗ – ವೆಬ್‌ತಾಣ ಪರಿಚಯ

http://ceckar.in/

■ ರಘುನಂದನ ಕೆ.
ಕ.ರಾ.ಸ.ಸಂ.ಸ.ನಿ., ಬೆಂಗಳೂರು.

2012ನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ವರ್ಷವನ್ನಾಗಿ ಆಚರಿಸಿ, ಸಹಕಾರದ ಸಾಧನೆಗಳೆಡೆಗೆ ಹಾಗೂ ಸುಭದ್ರ ಆರ್ಥಿಕ ವ್ಯವಸ್ಥೆಯೆಡೆಗೆ ಮಾನ್ಯತೆಯನ್ನು ಒದಗಿಸಲಾಗಿದೆ. ಕೇಂದ್ರ ಸರ್ಕಾರವು 97ನೇ ಸಂವಿಧಾನ ತಿದ್ದುಪಡಿಯ ಮೂಲಕ ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ಪ್ರಯತ್ನಿಸಿದೆ. ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರ ಕಾಯ್ದೆಯ ಬಹುತೇಕ ಅಂಶಗಳನ್ನು ಈ ತಿದ್ದುಪಡಿ ಒಳಗೊಂಡಿರುವುದು ಸೌಹಾರ್ದ ಕಾಯ್ದೆಯ ವೈಶಿಷ್ಟ್ಯ ಹಾಗೂ ಪ್ರಸ್ತುತತೆಯನ್ನು ಗುರುತಿಸಿದಂತಾಗಿದೆ. ಈ ತಿದ್ದುಪಡಿಯಲ್ಲಿ (243ಝಡ್‌ಕೆ) ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಗಾಗಿ ರಾಜ್ಯ ಸರ್ಕಾರಗಳು ಪ್ರತ್ಯೇಕ ಸಹಕಾರ ಚುನಾವಣಾ ಆಯೋಗವೊಂದನ್ನು ರಚಿಸುವುದೂ ಸೇರಿದೆ.



ಸಂವಿಧಾನ ತಿದ್ದುಪಡಿಗನುಗುಣವಾಗಿ ರಾಜ್ಯದಲ್ಲಿನ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆಗಳಿಗೂ ತಿದ್ದುಪಡಿ ಮಾಡಲಾಗಿದೆ. ಇದುವರೆಗೆ ರಾಜ್ಯದ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿ ಚುನಾವಣೆಯನ್ನು ಸಹಕಾರ ಸಂಘಗಳ ನಿಬಂಧಕರ ಮೇಲ್ವಿಚಾರಣೆ, ನಿರ್ದೇಶನ ಹಾಗೂ ನಿಯಂತ್ರಣಕ್ಕೊಳಪಟ್ಟು ನಡೆಸಲಾಗುತ್ತಿತ್ತು. ಈ ಚುನಾವಣೆಗಳನ್ನು ಮುಕ್ತ ನ್ಯಾಯೋಚಿತ ಹಾಗೂ ಪಾರದರ್ಶಕತೆಯಿಂದ ನಡೆಸುವ ಉದ್ದೇಶದಿಂದ, ಸಂವಿಧಾನ ತಿದ್ದುಪಡಿಗನುಗುಣವಾಗಿ ಸಹಕಾರ ಸಂಘಗಳ ಕಾಯ್ದೆ ಪ್ರಕರಣ 39ಎ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ಪ್ರಕರಣ 26ಎ ಗಳನ್ನು ಸೇರ್ಪಡೆ ಮಾಡಲಾಗಿದೆ. ಇದರಂತೆ ಇನ್ನು ಮುಂದೆ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗ ನಡೆಸಲಿದೆ.

ಈಗಾಗಲೇ ರಾಜ್ಯ ಸರ್ಕಾರವು ಚುನಾವಣಾ ಆಯುಕ್ತರು ಹಾಗೂ ಕಾರ್ಯದರ್ಶಿಗಳನ್ನೊಳಗೊಂಡ ಸಹಕಾರ ಚುನಾವಣಾ ಆಯೋಗವನ್ನು 18 ಮಾರ್ಚ್ 2013ರಂದು ಅಧಿಸೂಚನೆ ಹೊರಡಿಸುವ ಮೂಲಕ ರಚನೆ ಮಾಡಿರುತ್ತದೆ. ರಾಜ್ಯದಲ್ಲಿ ಈ ವರ್ಷದ ಅವಧಿಯಲ್ಲಿ ನಡೆಯಬೇಕಿದ್ದ ಸಹಕಾರ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಈ ವರ್ಷದಿಂದ ಜಾರಿಗೆ ಬಂದ ಸಹಕಾರ ಚುನಾವಣಾ ಆಯೋಗ ಈಗಾಗಲೇ ವೆಬ್‌ತಾಣವನ್ನು ಹೊಂದಿ ಚುನಾವಣೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಒದಗಿಸುತ್ತಿರುವ ಕಾರ್ಯ ಶ್ಲಾಘನೀಯ. ರಾಜ್ಯದ ಸಹಕಾರ ಸಂಸ್ಥೆಗಳ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳಿಗೆ ಹಾಗೂ ಸದಸ್ಯರಿಗೆ ಹೆಚ್ಚಿನ ಮಾಹಿತಿಯನ್ನು ಈ ವೆಬ್‌ತಾಣ ಒದಗಿಸುತ್ತದೆ.

**ವೆಬ್‌ತಾಣ 15 : http://ceckar.in/**

- ಸಹಕಾರ ಚುನಾವಣಾ ಆಯೋಗದ ರಚನೆ, ಅಧಿಕಾರ, ಕರ್ತವ್ಯಗಳ ಮಾಹಿತಿಯನ್ನು, ಸಹಕಾರ ಚುನಾವಣಾ ಆಯುಕ್ತರು ಹಾಗೂ ಕಾರ್ಯದರ್ಶಿಗಳಿಗೆ ಸಂಬಂಧಿಸಿದ ಕಾಯ್ದೆಬದ್ಧ ಮಾಹಿತಿಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಜಿಲ್ಲಾ ಚುನಾವಣಾಧಿಕಾರಿಗೆ ಸಂಬಂಧಿಸಿದ ನಿಯಮಗಳು ಹಾಗೂ ಕರ್ತವ್ಯಗಳು, ರಿಟರ್ನಿಂಗ್ ಆಫೀಸರ್‌ಗಳ ನೇಮಕಾತಿ ಹಾಗೂ ಅವರ ಕರ್ತವ್ಯಗಳನ್ನು ಇಲ್ಲಿ ನೋಡಬಹುದು.
- 1959ರ ಸಹಕಾರ ಸಂಘಗಳ ಕಾಯ್ದೆ ಹಾಗೂ 1960ರ ಸಹಕಾರ ಸಂಘಗಳ ನಿಯಮಗಳ ಆಧಾರದಲ್ಲಿ ರಚಿಸಿದ ಚುನಾವಣಾ ಕೈಪಿಡಿಯನ್ನು ಈ ತಾಣದಲ್ಲಿ ಪಡೆಯಬಹುದು.
- ಚುನಾವಣಾ ವೇಳಾಪಟ್ಟಿ, ಆಡಳಿತ ಮಂಡಳಿ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆ ಬಾಕಿ ಇರುವ ಜಿಲ್ಲಾವಾರು ಮಾಹಿತಿ ಪಟ್ಟಿ, ಚುನಾವಣೆ ಬಾಕಿ ಇರುವ ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಸ್ಥೆಗಳ ಪಟ್ಟಿಯನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.
- ಚುನಾವಣೆಗೆ ಸಂಬಂಧಿಸಿದಂತೆ ಹೊರಡಿಸಲಾದ 8 ಅಧಿಸೂಚನೆಗಳು, ಚುನಾವಣಾ ಪ್ರಕ್ರಿಯೆಯಲ್ಲಿ ಅತ್ಯಗತ್ಯವಾದ ನೋಟೀಸು, ವೇಳಾಪಟ್ಟಿ, ನಾಮಪತ್ರ ಸಲ್ಲಿಕೆ, ಹಿಂಪಡೆಯುವಿಕೆ, ಫಲಿತಾಂಶ ಪ್ರಕಟಣೆಯೂ ಸೇರಿದಂತೆ 16 ವಿಧದ ನಮೂನೆಗಳನ್ನು ಈ ತಾಣದಿಂದ ಪಡೆದುಕೊಳ್ಳಬಹುದು.
- ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ, ಚುನಾವಣಾ ಸಿಬ್ಬಂದಿಗಳಿಗೆ ನೀಡುವ ಸಂಭಾವನೆ ಇತ್ಯಾದಿ ವಿಷಯಗಳಿಗೆ ನೀಡಿದ ಆದೇಶಗಳು, ಚುನಾವಣಾ ಲೋಪಗಳು ಮತ್ತು ಕಾನೂನು ಕ್ರಮಗಳು, ಚುನಾವಣೆಯಲ್ಲಿ ಸಹಕಾರ ಸಂಸ್ಥೆಗಳ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆ, ಚುನಾವಣಾ ಪೂರ್ವಸಿದ್ಧತೆ ಮುಂತಾದ ವಿಷಯಗಳಿಗೆ ನೀಡಿದ ಸುತ್ತೋಲೆಗಳು ಕೂಡ ಈ ವೆಬ್‌ತಾಣದಲ್ಲಿ ಲಭ್ಯವಿದೆ.
- ಚುನಾವಣೆಗೆ ಸಂಬಂಧಿಸಿದ ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ, ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಈ ತಾಣದಲ್ಲಿ ನೋಡಬಹುದು.

ಸಹಕಾರ ಸಂಸ್ಥೆಗಳ ಚುನಾವಣೆಯನ್ನು ಒಂದು ಸ್ವತಂತ್ರ ಪ್ರಾಧಿಕಾರದಿಂದ ಪಾರದರ್ಶಕವಾಗಿ ಹಾಗೂ ರಾಜಕೀಯ ಹಸ್ತಕ್ಷೇಪ ರಹಿತವಾಗಿ ನಡೆಸಲು ಸಂವಿಧಾನ ತಿದ್ದುಪಡಿ ಮೂಲಕ ಅವಕಾಶ ಒದಗಿಸಲಾಗಿದೆ. ಇದರಿಂದ ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲ ಹಾಗೂ ಸಮರ್ಥ ಆಡಳಿತ ಮಂಡಳಿ ರಚನೆಯಾಗಿ ಸಹಕಾರ ಸಂಸ್ಥೆಗಳು ಸದೃಢವಾಗಿ ಆರ್ಥಿಕ ಶಕ್ತಿಯಾಗಿ ಬೆಳೆಯುವಂತಾಗಲಿ ಎನ್ನುವುದು ಸಹಕಾರಿಗಳ ಆಶಯವಾಗಿದೆ. ■

# ವ್ಯಕ್ತಿ ಪರಿಚಯ

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ ಬ್ಯಾಂಕಿನ ನೂತನ ಮುಖ್ಯ ಕಾರ್ಯ್ನಿರ್ವಹಣಧಿಕಾರಿಯಾಗಿ ಸಹಕಾರ ಇಲಾಖೆಯ ಹಿರಿಯ ಅಧಿಕಾರಿ ಅಪರ ನಿಬಂಧಕ ಶ್ರೀ ಜಿ.ಎಸ್.ರಮಣರೆಡ್ಡಿಯವರು ದಿನಾಂಕ 3-8-2013 ರಂದು ಮುಂದಿನ ಮೂರು ವರ್ಷಗಳ ಅವಧಿಗೆ ಅಧಿಕಾರ ವಹಿಸಿಕೊಂಡಿದ್ದಾರೆ.

ಶ್ರೀಯುತರು ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರಾಗಿದ್ದು 28-4-1982ರಲ್ಲಿ ಕರ್ನಾಟಕ ಸಹಕಾರ ಸೇವೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಪ್ರಾರಂಭಿಸಿದರು. ನಂತರ ಸಹಕಾರಿ ಇಲಾಖೆಯ ಹಾಗೂ ಸರಕಾರದ ಅಭಿವೃದ್ಧಿ ಇಲಾಖೆಯ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ವಿಶೇಷವಾಗಿ ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಕೊಡಗು,ಮಂಡ್ಯ,ಅಪೆಕ್ಸ ಬ್ಯಾಂಕಿನ ಕಾರ್ಯದರ್ಶಿಯಾಗಿ ಸರಕಾರದ ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಯಾಗಿ ಹೀಗೆ 31 ವರ್ಷಗಳ ಸೇವಾನುಭವವನ್ನು ಶ್ರೀಯುತರು ಹೊಂದಿದ್ದಾರೆ.



ಶ್ರೀ ಜಿ.ಎಸ್.ರಮಣರೆಡ್ಡಿ

ಕರ್ನಾಟಕ ವಿಶಿಷ್ಠ ಸಹಕಾರಿ ಸಂಘವೆಂದು ಖ್ಯಾತಿಯಿರುವ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಾರಿಗೆ ಸಹಕಾರ ಸಂಘವನ್ನು ಹುಟ್ಟುಹಾಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದವರು. ರಾಜ್ಯದ ಕೃಷಿ ಕ್ಷೇತ್ರದ ಹಣಕಾಸು ವ್ಯವಸ್ಥೆಯ ನೇತಾರನಾಗಿರುವ ಸಹಕಾರಿ ಅಪೆಕ್ಸ ಬ್ಯಾಂಕು ಒಟ್ಟಾರೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ವಿಶೇಷವಾಗಿ ಕೃಷಿ ಪತ್ತಿನ ಸಹಕಾರ ಸಂಘಗಳ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಜಾರಿಮಾಡಲು ಚಿಂತನೆ ನಡೆಸಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ■

## ಶ್ರೀ ಹೆಚ್.ಎಸ್. ನಾಗರಾಜಯ್ಯ ಸಹಕಾರಿ ಇಲಾಖೆಯ ನೂತನ ವಿಶೇಷ ಕರ್ತವ್ಯಾಧಿಕಾರಿ

ಸಹಕಾರ ಇಲಾಖೆಯ ಹಿರಿಯ ಅಧಿಕಾರಿ ಸಹಕಾರ ಸಂಘಗಳ ಅಪರ ನಿಬಂಧಕ ಶ್ರೀ ಹೆಚ್.ಎಸ್.ನಾಗರಾಜಯ್ಯರವರು ರಾಜ್ಯ ಶಾಸ್ತ್ರವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಕರ್ನಾಟಕ ಸರಕಾರದ ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಯಾಗಿ ದಿನಾಂಕ : 5-8-2013 ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

ಕರ್ನಾಟಕ ಸರಕಾರದ ಸಹಕಾರ ಸೇವೆಯಲ್ಲಿ 1984ರಲ್ಲಿ ಆಯ್ಕೆಯಾದ ನಂತರ ಸಹಾಯಕ ನಿಬಂಧಕರಾಗಿ, ಉಪ ನಿಬಂಧಕರಾಗಿ, ಜಂಟಿ ನಿಬಂಧಕರಾಗಿ ಹಾಲಿ ಅಪರ ನಿಬಂಧಕರಾಗಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅಪಾರ ಅನುಭವವುಳ್ಳವರಾಗಿದ್ದಾರೆ.



ಹೆಚ್.ಎಸ್. ನಾಗರಾಜಯ್ಯ

ಶ್ರೀಯುತರು ಬಳ್ಳಾರಿ ಜಿಲ್ಲೆಯ ಉಪನಿಬಂಧಕರಾಗಿದ್ದ ಅವಧಿಯಲ್ಲಿ ಹೊಸ ಪೇಟೆಯಲ್ಲಿ ಕೃಷಿ ಸಲಕರಣೆಗಳ ಉತ್ಪಾದನಾ ಸಹಕಾರ ಸಂಘವೆಂಬ ವಿನೂತನ ಮಾದರಿಯ ಸಹಕಾರ ಸಂಘವನ್ನು ಹಾಗೂ ಕೆ.ಎಮ್.ಎಫ್ ಮಾದರಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಮಾದರಿಯಲ್ಲಿ ಕೋಲಾರ ಜಿಲ್ಲೆಯ ಬಂಗಾರ ಪೇಟೆ, ಮುಳಬಾಗಿಲು ,ಮಾಲೂರು ತಾಲ್ಲೂಕುಗಳಲ್ಲಿ ಗಿಡ ನೆಡುವವರ ಸಹಕಾರ ಸಂಘಗಳನ್ನು ಹುಟ್ಟುಹಾಕಲು ವಿಶೇಷವಾಗಿ ಪ್ರಯತ್ನಿಸಿ ಸಫಲರಾದವರು. ಸಹಕಾರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿಹೊಂದಿರುವ ಶ್ರೀಯುತರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪರಿಣಾಮಕಾರಿಯಾದ ಸಹಕಾರ ಶಿಕ್ಷಣ ಹಾಗೂ ತರಬೇತಿ ಅವಶ್ಯಕವೆಂದು ಅಭಿಪ್ರಾಯ ಹೊಂದಿರುತ್ತಾರೆ. ■

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀಮತಿ ಕೃತಿ ಜನಾರ್ಧನ್ | 9900244207 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀ ಶ್ರೀಕಾಂತ | 9916814888 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharda@souharda.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : ಶರಣಗೌಡ ಜಿ. ಪಾಟೀಲ
ಸಂಚಿಕೆ ಸಿದ್ಧತೆ : ವಿ.ಜೆ.ಕಾರಕೂನ
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.



## ನಿಮ್ಮ ಪ್ರಶ್ನೆ ನಮ್ಮ ಉತ್ತರ

**ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ನಂತರ ಸೌಹಾರ್ದ ಸಹಕಾರಿಗಳಲ್ಲಿ ಉದ್ಭವಿಸಿರುವ ಅನೇಕ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯು ಉತ್ತರಿಸಿರುವುದನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.**

**ಪ್ರಶ್ನೆ : 2012-13ನೇ ಸಾಲಿನ ಸಾಮಾನ್ಯ ಸಭೆಯ ಕೋರಂ ಎಷ್ಟಿರಬೇಕು?**

**ಉತ್ತರ** : ಕೇಂದ್ರ ಸರ್ಕಾರವು ಸಂವಿಧಾನ(97ನೇ ತಿದ್ದುಪಡಿ) ಅಧಿನಿಯಮ-2011ರ ಮೂಲಕ ಸಹಕಾರ ವಿಷಯವನ್ನು ಸಂವಿಧಾನದಲ್ಲಿ ಸೇರ್ಪಡೆಗೊಳಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಕಾಯ್ದೆಗೂ ತಿದ್ದುಪಡಿಯಾಗಿದ್ದು, ಸದರಿ ತಿದ್ದುಪಡಿಗಳು 11 ಫೆಬ್ರವರಿ 2013ರಿಂದ ಜಾರಿಗೆ ಬಂದಿರುತ್ತದೆ. ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 30(4)ರಲ್ಲಿ ಸಾಮಾನ್ಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿಗದಿಪಡಿಸಬಹುದಾದಷ್ಟು ಇರತಕ್ಕದ್ದು, ಆದರೆ ಅಂತಹ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನ ಹಕ್ಕುಳ್ಳ ಸದಸ್ಯರ ಶೇಕಡ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಎಂದಿರುವುದರಿಂದ 11 ಫೆಬ್ರವರಿ 2013 ನಂತರ ನಡೆಯುವ ಸಹಕಾರಿಯ ಸಾಮಾನ್ಯ ಸಭೆಗೆ ಕಾಯ್ದೆಯ ಪ್ರಾವದಾನದಂತೆ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನ ಹಕ್ಕುಳ್ಳ ಸದಸ್ಯರ ಶೇಕಡ ಇಪ್ಪತ್ತಕ್ಕೆ ಕಡಿಮೆ ಇಲ್ಲದಷ್ಟು ಇರತಕ್ಕದ್ದು.

**ಪ್ರಶ್ನೆ : ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ನಿರ್ದೇಶಕರು ರಾಜೀನಾಮೆ ನೀಡಿದ ಪಕ್ಷದಲ್ಲಿ ಅಂತಹ ಸ್ಥಾನವನ್ನು ಯಾವ ರೀತಿ ಭರ್ತಿ ಮಾಡಬೇಕು.**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ತಿದ್ದುಪಡಿಯನ್ವಯ ಮರಣ, ರಾಜೀನಾಮೆ, ಅನರ್ಹತೆಯ ಕಾರಣದಿಂದಾಗಿ ಅಥವಾ ಇತರ ಯಾವುದೇ ಕಾರಣಗಳಿಗಾಗಿ ನಿರ್ದೇಶಕನ ಹುದ್ದೆಯಲ್ಲಿ ಆಕಸ್ಮಿಕ ರಿಕ್ತತೆಯಾದಲ್ಲಿ, ಆಡಳಿತ ಮಂಡಳಿಗೆ ಚುನಾವಣೆ ನಡೆದ ದಿನಾಂಕದಿಂದ ಎರಡೂವರೆ ವರ್ಷವಾಗಿದ್ದಲ್ಲಿ (ಮೊದಲ ಎರಡೂವರೆ ವರ್ಷ) ಅಂತಹ ರಿಕ್ತತೆಯಾದ ನಿರ್ದೇಶಕರ ಸ್ಥಾನವನ್ನು ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗುತ್ತದೆ. ಈ ಕುರಿತಾಗಿ ಚುನಾವಣೆ ನಡೆಸಲು ಮುಖ್ಯ ಕಾರ್ಯನಿರ್ವಾಹಕನು ಸಹಕಾರ ಚುನಾವಣಾ ಆಯೋಗಕ್ಕೆ ಲಿಖಿತವಾಗಿ ತಿಳಿಸಿ ಚುನಾವಣೆ ನಡೆಸಲು ಕ್ರಮವಿಡಬೇಕು.

ಆಡಳಿತ ಮಂಡಳಿಗೆ ಚುನಾವಣೆ ನಡೆದ ದಿನಾಂಕದಿಂದ ಎರಡೂವರೆ ವರ್ಷದ ನಂತರದಲ್ಲಿ (ಕೊನೆಯ ಎರಡೂವರೆ ವರ್ಷ) ಅಂತಹ ರಿಕ್ತತೆಯಾದ ನಿರ್ದೇಶಕರ ಸ್ಥಾನಗಳನ್ನು ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯದಂತೆ ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿದೆ. ಕರಡು ಸೌಹಾರ್ದ ನಿಯಮ 5ಎಕೆ ರಂತೆ ಯಾವುದೇ ಸಹಕಾರಿಯ ನಿರ್ದೇಶಕ / ಪ್ರತಿನಿಧಿಯ ಪದದಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಅಂಥ ರಿಕ್ತತೆಯು ಉಂಟಾದ ಏಳು ದಿನಗಳ ಒಳಗೆ, ಸಹಕಾರಿ ಚುನಾವಣಾ ಆಯೋಗಕ್ಕೆ ಅಂಥ ರಿಕ್ತತೆ ಉಂಟಾಗಿರುವ ಬಗ್ಗೆ ತಿಳಿಸಬೇಕು. ಸಹಕಾರಿ ಚುನಾವಣಾ ಆಯೋಗವು ಖಾಲಿ ಬಿದ್ದ ನಿರ್ದೇಶಕ / ಪ್ರತಿ ನಿಧಿ ಹುದ್ದೆಗಳಿಗೆ ಖಾಲಿ ಬಿದ್ದ ಅರವತ್ತು ದಿನಗಳ ಒಳಗಾಗಿ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ಚುನಾವಣೆ ನಡೆಸಬೇಕು.

ಆದರೆ ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ತೆಗೆದುಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಇದ್ದಲ್ಲಿ ಅಂಥ ಸಹಕಾರಿಗೆ ಸಂಯುಕ್ತ ಸಹಕಾರಿಯು ಸೌಹಾರ್ದ ಅಧಿನಿಯಮ ಕಲಂ 38ಎ ರಡಿ ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು. ಚುನಾವಣೆ ನಡೆದು ಆಡಳಿತ ಮಂಡಳಿ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಬೇಕು.

ಆದರೆ ಸಹಕಾರಿಯ ಅಧ್ಯಕ್ಷರ ಸ್ಥಾನದಲ್ಲಿ ರಿಕ್ತತೆ ಉಂಟಾದ್ದಲ್ಲಿ ಅಂತಹ ಸ್ಥಾನವನ್ನು ಚುನಾವಣೆ ಮೂಲಕವೇ ಭರ್ತಿ ಮಾಡಬೇಕು. ಅಧ್ಯಕ್ಷರ ಸ್ಥಾನವನ್ನು ನಾಮನಿರ್ದೇಶನದ ಮೂಲಕ ಭರ್ತಿ ಮಾಡಲು ಅವಕಾಶವಿರುವುದಿಲ್ಲ. ಅಧ್ಯಕ್ಷರ ಸ್ಥಾನದಲ್ಲಿ ರಿಕ್ತತೆ ಉಂಟಾದ್ದಲ್ಲಿ ಈ ಕುರಿತಾಗಿ ಸಹಕಾರ ಚುನಾವಣಾ ಆಯೋಗಕ್ಕೆ ಲಿಖಿತವಾಗಿ ತಿಳಿಸುವ ಮೂಲಕ ಚುನಾವಣೆ ನಡೆಸಬೇಕಾಗುತ್ತದೆ

**ಪ್ರಶ್ನೆ : ಯಾವುದೇ ನಿರ್ದೇಶಕರು ಅನುಮತಿ ಪಡೆದು ನಿರಂತರ ಎಷ್ಟು ಆಡಳಿತ ಮಂಡಳಿ ಸಭೆಗಳಿಗೆ ಗೈರುಹಾಜರಾಗಲು ಕಾನೂನಿನಲ್ಲಿ ಅವಕಾಶವಿರುತ್ತದೆ.**

**ಉತ್ತರ** : ಸೌಹಾರ್ದ ಸಹಕಾರಿ ಅಧಿನಿಯಮದಲ್ಲಿ ಯಾವುದೇ ನಿರ್ದೇಶಕರು ಅನುಮತಿ ಪಡೆದು ನಿರಂತರ ಎಷ್ಟು ಸಭೆಗಳಿಗೆ ಗೈರು ಹಾಜರಾಗಬಹುದೆಂಬ ಕುರಿತು ಮಿತಿ ನಿಗದಿಪಡಿಸಿರುವುದಿಲ್ಲ. ಆದರೆ ನಿರ್ದೇಶಕರ ರಜಾ ಅನುಮತಿಯನ್ನು ಸ್ವೀಕರಿಸುವ ಹಾಗೂ ನಿರಾಕರಿಸುವ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ. ಒಂದು ವೇಳೆ ನಿರ್ದೇಶಕರು ನೀಡಿರುವ ಗೈರುಹಾಜರಿ ಅನುಮತಿಯನ್ನು ಆಡಳಿತ ಮಂಡಳಿಯು ನಿರಾಕರಿಸಿದ ನಂತರದಲ್ಲೂ ಅಂತಹ ನಿರ್ದೇಶಕರು ಆಡಳಿತ ಮಂಡಳಿ ಸಭೆಗೆ ಹಾಜರಾಗದಿದ್ದಲ್ಲಿ ಅಂತಹ ಸಂದರ್ಭದಲ್ಲಿ ನಿರ್ದೇಶಕರು ಗೈರುಹಾಜರಾಗಿರುತ್ತಾರೆಂದು ಪರಿಗಣಿಸಬಹುದಾಗಿದೆ

**ಪ್ರಶ್ನೆ : ಕಾಯ್ದೆಯ ಮೊದಲಿನ ಪ್ರಾವದಾನದಂತೆ ಮಾರ್ಚ್ 2014ಕ್ಕೆ ಸಹಕಾರಿಯ ಆಡಳಿತ ಮಂಡಳಿಯ ಪದಾವಧಿಯು ಮುಕ್ತಾಯವಾಗಲಿದ್ದು, ಈ ಕುರಿತು ಯಾವ ರೀತಿ ಕ್ರಮವಿಡಬೇಕು.**

**ಉತ್ತರ** : ಸೌಹಾರ್ದ ಕಾಯ್ದೆ ಕಲಂ 31(2)(ಐ–4)ರಲ್ಲಿ ತಿಳಿಸಿರುವಂತೆ ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು ಎಂದಿರುವುದರಿಂದ ತಮ್ಮ ವ್ಯಾಪ್ತಿಯ ಸಹಕಾರ ಜಿಲ್ಲಾ ಚುನಾವಣಾಧಿಕಾರಿಗಳಿಗೆ (ಈಗಾಗಲೇ ಸಹಕಾರಿಗಳ ಉಪ ನಿಬಂಧಕರನ್ನು ಜಿಲ್ಲಾ ಚುನಾವಣಾಧಿಕಾರಿಯಾಗಿ ನೇಮಿಸಿ ಸಹಕಾರ ಚುನಾವಣಾ ಆಯೋಗವು ಆದೇಶ ಹೊರಡಿಸಿರುತ್ತದೆ) ಸಹಕಾರಿಯ ಆಡಳಿತ ಮಂಡಳಿಯ ಪದಾವಧಿ ಮುಕ್ತಾಯವಾಗಿರುವ ಕುರಿತು ಲಿಖಿತವಾಗಿ ತಿಳಿಸಬೇಕು.

ಕರಡು ಸೌಹಾರ್ದ ಸಹಕಾರಿ ನಿಯಮ 5ಬಿ ರಂತೆ ಜಿಲ್ಲಾ ಚುನಾವಣಾಧಿಕಾರಿ ಆಡಳಿತಮಂಡಳಿಗಳಿಗೆ ಪದಾವಧಿ ಮುಕ್ತಾಯವಾಗುವ ದಿನಾಂಕದ ಕನಿಷ್ಠ 120 ದಿನಗಳ ಪೂರ್ವದಲ್ಲಿ ಸಹಕಾರಿ ಚುನಾವಣಾ ಆಯೋಗಕ್ಕೆ ವಿವರ ಸಲ್ಲಿಸಬೇಕಿರುವುದರಿಂದ ಸಹಕಾರಿಯ ಆಡಳಿತ ಮಂಡಳಿಯ ಪದಾವಧಿಯ ಮುಕ್ತಾಯಕ್ಕಿಂತ ಕನಿಷ್ಠ 120 ದಿನಗಳಿಗೆ ಮುಂಚೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಲಿಖಿತವಾಗಿ ವಿವರಗಳನ್ನು ಸಲ್ಲಿಸಬೇಕಾಗುತ್ತದೆ.

**ಪ್ರಶ್ನೆ : ಸಹಕಾರಿಯ ಆಡಳಿತ ಮಂಡಳಿಯ ಅಧಿಕಾರಾವಧಿಯ ಕುರಿತು.**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ ಸಂಬಂಧಿಸಿದ ತಿದ್ದುಪಡಿಗಳು 11 ಫೆಬ್ರವರಿ 2013ರಿಂದ ಜಾರಿಗೆ ಬಂದಿರುತ್ತದೆ. ಈ ದಿನಾಂಕದ ನಂತರದಲ್ಲಿ ರಚನೆಯಾದ ಆಡಳಿತ ಮಂಡಳಿಗೆ ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳ ಪದಾವಧಿ ಎಂಬ ಪ್ರಾವಧಾನ ಅನ್ವಯಿಸುತ್ತದೆ ಮತ್ತು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರುತ್ತದೆ.

ಅಧಿನಿಯಮ ತಿದ್ದುಪಡಿ ಜಾರಿಯಾಗುವುದಕ್ಕೂ ಪೂರ್ವದಲ್ಲಿ ರಚನೆಯಾಗಿರುವ ಆಡಳಿತ ಮಂಡಳಿಗೆ ಹಿಂದಿನ ಪ್ರಾವಧಾನದಂತೆ ಪದಧಾರಣೆ ಮಾಡಿದ ದಿನಾಂಕದಿಂದ ಐದು ಸಹಕಾರ ವರ್ಷಗಳ ಪದಾವಧಿಯಿರುತ್ತದೆ (ಗಮನಿಸಿ–ಮಂಡಲಿಗೆ ಚುನಾವಣೆಯನ್ನು ವರ್ಷದ ಮಧ್ಯದಲ್ಲಿ ನಡೆಸಲಾಗಿದ್ದರೆ ಆ ವರ್ಷದ ಉಳಿದ ಭಾಗವನ್ನು ಒಂದು ಪೂರ್ಣ ವರ್ಷವೆಂದು ಭಾವಿಸತಕ್ಕದ್ದು) ಮತ್ತು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿಯ ಪದಾವಧಿಯು ಚುನಾವಣೆ ದಿನಾಂಕದಿಂದ ಎರಡೂವರೆ ವರ್ಷಗಳಾಗಿರುತ್ತದೆ. ಉಳಿಕೆ ಎರಡೂವರೆ ವರ್ಷಗಳ ಅವಧಿಗೆ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮೂಲಕ ನಡೆಸಬೇಕು. ■

## ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 20–9–2013ರಂದು ನಗರದ ಸರ್ ಪುಟ್ಟಣ್ಣಚೆಟ್ಟಿ ಟೌನ ಹಾಲ್ ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಬೆಳಿಗ್ಗೆ 11–00ಕ್ಕೆ ನಡೆಯಲಿದೆ. ಭಾಗವಹಿಸಲು ಅರ್ಹತೆಯಿರುವ ರಾಜ್ಯದ ಸೌಹಾರ್ದ ಸಹಕಾರಿಗಳು ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಕೋರಿದೆ. ಸಂಯುಕ್ತ ಸಹಕಾರಿಯು ಒದಗಿಸಿರುವ ಐ.ಡಿ.ಕಾರ್ಡ್‌ಗಳನ್ನು ಹಾಗೂ ಸಾಮಾನ್ಯ ಸಭೆಯ ಪುಸ್ತಕವನ್ನು ಜೊತೆಯಲ್ಲಿ ತರಲು ಸೂಚಿಸಿದೆ. ಭಾಗವಹಿಸುವ ಪ್ರತಿನಿಧಿಗಳಲ್ಲದವರಿಗೆ ಸಾಮಾನ್ಯ ಸಭೆಯಲ್ಲಿ ಪ್ರವೇಶವಿರುವುದಿಲ್ಲ. ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳಬಹುದಾಗಿದೆ.

## ಸೌಹಾರ್ದ ಸಹಕಾರಿಗಳಿಗೆ ಸಾಫ್ಟ್‌ವೇರ್, ಸುರಕ್ಷತಾ ಉಪಕರಣಗಳು, ಇನ್ಶೂರೆನ್ಸ್ ಹಾಗೂ ಇತರೆ ಆಧುನಿಕ ತಂತ್ರಜ್ಞಾನಗಳ ಮಾಹಿತಿ ಒದಗಿಸುವ ಕುರಿತು

ವಾರ್ಷಿಕ ಸಾಮಾನ್ಯ ಸಭೆಯು ಮುಗಿದ ಮೇಲೆ ಭೋಜನದ ನಂತರ ಅದೇ ಸ್ಥಳದಲ್ಲಿ ಕೆಳಕಂಡ ತಂತ್ರಾಂಶ ಪೂರೈಕೆದಾರರು, ವಿಮಾ ಉತ್ಪನ್ನ ಅಥವ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ ಹಾಗೂ ಸುರಕ್ಷತಾ ಉಪಕರಣಗಳ ಪೂರೈಕೆದಾರರು ತಮ್ಮ ತಮ್ಮ ಸೇವೆ / ಉಪಕರಣಗಳ ಕುರಿತು ಮಾಹಿತಿ ಒದಗಿಸಲಿದ್ದಾರೆ. ಇದರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

**Software Company :** Bank Soft, Unify Infotech, Amalgmated, Emkay-Global Financial Services, SiFiN, K M Infosys, Overdrive Infotechs, IREX, Technologies, One Vega Systems.

**Insurance Company :** BharathiAxa, Iffco Tokiyo, Videocon - General Insurence.

**Securiety System :** SiFiN, Smart Security Solutions, Excellent Copier, Kubs, I-Lead Solution, Ansata Instruments, Godrej, Softree, Unique Technologies, Cinesonic.

**Others :** Western Union

ಮೇಲೆ ಹೇಳಲಾದ ಸಂಸ್ಥೆಗಳ ಜೊತೆಯಲ್ಲಿ ಇನ್ನೂ ಅನೇಕ ಸಂಸ್ಥೆಗಳು ಸಭೆಯಲ್ಲಿ ಭಾಗವಹಿಸಿ ಮಾಹಿತಿ ನೀಡಲಿದ್ದಾರೆ. ಈ ಸಭೆಯ ಸದುಪಯೋಗವನ್ನು ಪಡೆದುಕೊಳ್ಳಲು ಕೋರಿದೆ.

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

ಜಾಹೀರಾತು

godrej | SECURITY SOLUTIONS

Is there something missing in your

secur ty
solut ons?

Upgrade to intelligent security solutions from Godrej.

Often what you think is complete security is just not enough to prevent trouble. What you need are intelligent security solutions that'll take care of all your security needs. Godrej is your trusted comprehensive security solutions provider that assures you complete safety. What's more, you are assured of hassle-free operations through our AMC. So, call today and enjoy a secure tomorrow.

Monitoring and Surveillance Solutions

Physical Security Solutions



Be Intelligent. Be Safe.

**For more information contact:** Sheshachala B R- 9986327492, Shridhar Kashyap- 9886781343, Jitendra Chowbey- 9538288224, Priyesh Kumar Deb- 9986569943

**Godrej & Boyce Mfg. Co. Ltd.** Godrej Security Solutions, Plant 17, Pirojshanagar, Vikhroli (East), Mumbai - 400 079

**Toll-free: 1800 209 9955 | SMS <GSS> to <53636> | Email: secure@godrej.com | Visit: www.godrejsecure.com**

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010